ಕೊರವಂಜಿ



Koravanji

ಏಪ್ರಿಲ್
೧೯೫೨

ಸಂಪಾದಕರು :
ಶ್ರೀ|| ರಾ. ಶಿ.

ಬರಹಗಾರರು :

ಶ್ರೀ|| ನಾ. ಕಸ್ತೂರಿ
ಶ್ರೀ|| ಪಟ್ಟಾಭಿ
ಶ್ರೀ|| ದಾಶರಥಿ ದೀಕ್ಷಿತ್
ಶ್ರೀ|| ರೇವಣ್ಣ
ಶ್ರೀ|| ಕಾಮತ್
ಶ್ರೀಮತಿ|| ಸುನಂದಮ್ಮ
ಶ್ರೀ|| ರಾಮೇಶ್ವರಿ
ಶ್ರೀ|| ವೈ. ಎಂ. ಪುಟ್ಟಸ್ವಾಮಿ
ಶ್ರೀ|| ರಾಮು
ಶ್ರೀ|| ಅ. ರಾ. ಸೇ.
ಇತ್ಯಾದಿ, ಇತ್ಯಾದಿ.

ನಗೆಯ ಮಾಸಪತ್ರಿಕೆ

ಬಿಡಿ ಪ್ರತಿ ಕೇವಲ ನಾಲ್ಕಾಣೆ


For 3 way Beauty Treatment....
RAJA
SNOW
RAJA
AMLA
RAJA
SNOW
AMLA HAIR OIL, KASTURI SOAP
MANYAM & CO. BANGALORE MADRAS MADURAI BOMBAY

ಪ್ರೇಮವೇ ದೈವ, ಪ್ರೇಮವೇ ಧರ್ಮ ಎಂದು ಸಾರುವ ಉತ್ತಮ ಚಿತ್ರ !

ಮಾರ್ಚಿ 31 ರಿಂದ

ಬೆಂಗಳೂರು :

ಮೆಜೆಸ್ಟಿಕ್—ನಾಜ್

★

ಮೈಸೂರು :

ನ್ಯೂ ಅಪೇರಾ

ಮತ್ತು ಸಂಸ್ಥಾನದ ಇತರ **8** ಮುಖ್ಯ ಕೇಂದ್ರಗಳಲ್ಲಿ



ಆರ್. ಎನ್. ಆರ್. ಪಿಕ್ಚರ್ಸ್‌ರವರ -

ಪ್ರೇಮದ ಪುತ್ರಿ [ಕನ್ನಡ]

ಶ್ರೀರಂಜಿನಿ (ಜೂನಿಯರ್), ಸಂಧ್ಯಾ, ಸೂರ್ಯಕಲಾ, ಆರ್. ನಾಗೇಂದ್ರರಾವ್,
ಉದಯಕುಮಾರ್, ಕಲ್ಯಾಣಕುಮಾರ್, ರಾಜನಾಲ, ಗಣಪತಿಭಟ್ಟ,
ಪಿ. ಡಿ ಸಂಬಂಧಂ, ಬೇಬಿ ಉಮಾ ಮುಂತಾದವರ ಅಭಿನಯ.

ನಿರ್ಮಾಪಕ-ನಿರ್ದೇಶಕ : ಆರ್. ನಾಗೇಂದ್ರರಾವ್

ನಿಮ್ಮ ಊರಿನ ಚಿತ್ರಮಂದಿರದಲ್ಲಿ ನೋಡಿ ಆನಂದಿಸಿ

A TALLAM RELEASE

ಕಟಕ

Statement of ownership of Koravanji (Kannada)

1.	*Place of Publication*	:	KORAVANJI Balepet, Bangalore-9.
2.	*Periodicity of Publication*	:	MONTHLY 1st of Every Month.
3.	*Printers Name*	:	Sri B. SREENIVASA IYENGAR,
	Address	:	6, Cottonpet, Bangalore-2.
	Nationality	:	INDIAN
4.	*Publisher's Name*	:	Sri B. N. GUPTHA,
	Nationality	:	INDIAN
	Address	:	KORAVANJI, Balepet, Bangalore-9.
5.	*Editor's Name*	:	Dr. M. SIVARAM
	Nationality	:	INDIAN
	Address	:	Balepet, Bangalore-9.
6.	*Name and Address of Individuals who own the Paper*	. :	M. SIVARAM Sole Proprietor.

I, B. N. GUPTHA, hereby declare that the particulars given above are true to the best of my knowledge and belief

B. N. GUPTHA,
Publisher's Name.

30th March 57

ಪ್ರಿಯ ಓದುಗರೇ!

ಈ ದಿನ ಹತ್ತು ರೂಪಾಯಿಗಳನ್ನು ಕೊರವಂಜಿಗೆ ಈ ಪತ್ರವನ್ನು ಪೂರ್ಣಗೊಳಿಸಿ ಕಳಿಸಿಕೊಡಿ. ನಾಲ್ಕು ವರ್ಷ, ನಲವತ್ತೆಂಟು ತಿಂಗಳು, ಮೊದಲ ತಾರೀಖಿನ ಸಮಯಕ್ಕೆ ನಿಮ್ಮ ವಿಳಾಸಕ್ಕೆ, ನೀವು ಸೂಚಿಸಿದ ವಿಳಾಸಕ್ಕೆ ಕೊರವಂಜಿಯು ಬಂದು, ಕಣಿ ಹೇಳಿ ನಗಿಸುತ್ತಾಳೆ.

ಮರೆಯುವ ಮೊದಲೇ ಇದನ್ನು ಪೂರಣ ಮಾಡಿ:— ಮಿಗಿಸುವ ಎರಡು ರೂಪಾಯಿಗಳನ್ನು ನಿಮ್ಮ ಸ್ವಂತ ಖರ್ಚಿಗೆ ಇಟ್ಟುಕೊಳ್ಳಿ.

ವ್ಯವಸ್ಥಾಪಕ,
ಕೊರವಂಜಿ.

ವ್ಯವಸ್ಥಾಪಕರೇ!

ನೀವು ಪ್ರಚುರಪಡಿಸಿದ ಸವಲತ್ತನ್ನು ಉಪಯೋಗಿಸಿಕೊಂಡು ಹತ್ತು ರೂಪಾಯಿಗಳನ್ನು ಕಳಿಸುತ್ತಿದ್ದೇವೆ. ಈ ವಿಳಾಸಕ್ಕೆ ಕೊರವಂಜಿಯನ್ನು ನಾಲ್ಕು ವರ್ಷ ಕಳಿಸಿಕೊಡಿ.

ಶ್ರೀ॥ ....

....

....

ಇದನ್ನೇ ಪೂರ್ಣಗೊಳಿಸಿದರೂ ಆಯಿತು—ಬೇರೆ ಪತ್ರ ಬರೆದರೂ ಸಮ.

ವ್ಯವಸ್ಥಾಪಕ,
ಕೊರವಂಜಿ ಕಾರ್ಯಾಲಯ,
ಬಳೇಪೇಟೆ, ಬೆಂಗಳೂರು-೯.



ಸಂಪುಟ ೧೬ ಏಪ್ರಿಲ್ ೧೯೫೭ ಸಂಚಿಕೆ ೧

ನವ ಹೇವಿಳಂಬಿ ವರ್ಷದಲ್ಲಿ ನಮ್ಮ ಓದುಗರೆಲ್ಲರೂ, ನಮ್ಮ ಸಂಸ್ಥಾನದವರೆಲ್ಲರೂ, ನಮ್ಮ ದೇಶದವರೆಲ್ಲರೂ, ನಮ್ಮ ಲೋಕದವರೆಲ್ಲರೂ, ಸುಖಸಂತಸದ ಹಿತಜೀವನ ಮಾಡುವಂತೆ ಜಗನ್ನಿಯಾಮಕನು ಆಶೀರ್ವದಿಸಲೆಂದು ಆತನನ್ನು ಪ್ರಾರ್ಥಿಸುತ್ತೇವೆ.

ಹಾಗೇನಾದರೂ ದೇವರು ವೈಪುರೀತು ದಯೆಮಾಡಿದರೆ, ಆಗ ನಮ್ಮ ಪತ್ರಿಕೆಯ ಓದುಗರು ಪತ್ರಿಕೆಯನ್ನು **ಕೊಂಡು** ಓದುತ್ತಾರೇನೋ ಎಂಬ ಆಶೆ. ನಮ್ಮ ಏಜೆಂಟರುಗಳು ಬಾಕಿ ಹಣವನ್ನು ಹಿಂತಿರುಗಿಸುತ್ತಾರೇನೋ ಎಂಬ ಹಿರಿಯಾಶೆ. ನಮ್ಮ ಜಾಹೀರಾತುದಾರರು ಔದಾರ್ಯದಿಂದ ಸಹಾಯಮಾಡುತ್ತಾರೇನೋ ಎಂಬ ದುರಾಶೆ.

ಇಲ್ಲದಿದ್ದರೆ ಕೊರವಂಜಿಗೆ ಹೇವಿಳಂಬಿಯು, ಹೆಳವನ ವಿಳಂಬತನದ ಅನುಭವವು ದೊರೆಯುವುದೋ ಏನೋ! ಕಾಲು ಕುಂಟಾಗಿ ಸೊಂಟ ಮುರಿಯುತ್ತೋ ಏನೋ!!

ಆ ಕಾರಣದಿಂದ ನಮ್ಮ ಓದುಗರಲ್ಲಿ ಒಂದು ಪ್ರಾರ್ಥನೆ. ಮನೆಯವರಿಗೆ ಕಾಣದಂತೆ ನೀವು ಎರಡು ರೂಪಾಯಿ ಹಬ್ಬದದಿನ ಉಳಿತಾಯ ಮಾಡುವುದಕ್ಕಾಗಿ ಒಂದು ಸೌಲಭ್ಯವನ್ನು ಕಲ್ಪಿಸಿದ್ದೇವೆ; ಹತ್ತು ರೂಪಾಯಿಗಳನ್ನು ನೀವು ಒಟ್ಟಿಗೆ ಚಂದಾ ಕೊಟ್ಟರೆ, ನಾಲ್ಕು ವರ್ಷ ನಿಮ್ಮನೆಯ ಬಾಗಿಲಿಗೆ ಕೊರವಂಜಿಯು ಮೊದಲ ತಾರೀಖು ಬಂದು ಕಣಿ ಹೇಳಿ ಹೋಗುತ್ತಾಳೆ.

ಈ ಸೌಲಭ್ಯವನ್ನು ಉಪಯೋಗಿಸಿಕೊಂಡು ನೀವು ನಿಮ್ಮ ಸಹಾಯವನ್ನು ಮಾಡುವಿರೆಂದು ನಂಬಿದ್ದೇವೆ.

ಶ್ರೀ ದಾಶರಥಿ, ಶ್ರೀಮತಿ ಸುನಂದಮ್ಮ, ಶ್ರೀ ಅ. ರಾ. ಸೇ., ಶ್ರೀ ರಾಮಿ, ಇತ್ಯಾದಿ ಸಹಾಯಕ ಬಂಧುಗಳ ನೆರವನ್ನು ಸ್ಮರಿಸಿಕೊಳ್ಳುತ್ತೇವೆ.

ನಗು ಕನ್ನಡಿಗರಿಗೆ ಸನ್ಮಂಗಳವಾಗಲಿ.

ಕುಹಕಿಡಿಗಳು

"ವಿಷಾದ ಸೌಧದಲ್ಲಿ" ಯಾರು ಮುಂದೆ ಮುಖ್ಯಮಂತ್ರಿಗಳಾಗುತ್ತಾರೆ ಎನ್ನುವ ಕಣಿಯನ್ನು ಹೇಳದೆ ಏನೇನೋ ಬರೆಯುತ್ತೀರಲ್ರೀ" ಎಂದೊಬ್ಬ ಓದುಗರು ತೀವ್ರ ವಾಗಿ ಕೊರವಂಜಿಯನ್ನು ಟೀಕಿಸಿ ಬರೆದಿದ್ದಾರೆ.

—ಯಾರು ಮುಖ್ಯಮಂತ್ರಿಗಳಾದರೇನು? ಸರ್ಕಾರದ ಪ್ರತಿಭಾವಂತ ಕಾರ್ಯ ದರ್ಶಿಗಳಿರುವತನಕ ಯಾತಕ್ಕೆ ಹೆದರಬೇಕು ಎಂದೇ ಕೊರವಂಜಿ ಪಲುಕುತ್ತಾಳೆ.

* * *

ಸರ್ಕಾರದ ಕೆಲಸಗಳನ್ನು ನೋಡಿದಮೇಲೆ — "ಹೇ! ವಿಳಂಬಿ" ಅಂತ ಗೋಗರೆಯುವಂತಾಗುವುದಿಲ್ಲವೇ!!

— ಕಾರಣ ನಮ್ಮ ಭಾರತ ಸರ್ಕಾರದವರು ಈ ವರ್ಷದಿಂದ ಶಾಲಿವಾಹನ ಶಕೆಯ ರೀತಿಯಾಗಿಯೂ ಪಂಚಾಂಗಕ್ರಮ ಏರ್ಪಡಿಸಿರುವುದು ಬಲು ಸಹಜ.

* * *

ಪಾಕಿಸ್ತಾನದಿಂದ ದೆಹಲಿಗೆ ಬರುವ ಅಂತರದಲ್ಲಿ ಶ್ರೀ ಜಾರಿಂಗ್‌ರವರು ಮಹೇಂಜದೋರೋಗೆ ಜಾರಿದರಂತೆ ಎರಡುದಿನ.

—ಮಹೇಂಜದೋರೋವು ಆ ಗತಿಗೆ ಬರಲು ಅದಕ್ಕೂ ಕಾಶ್ಮೀರ ಸಮಸ್ಯೆ ಏನಾದರೂ ಒದಗಿತ್ತೇನೋ ಎಂದು ಕಂಡುಹಿಡಿಯಲು ಹೋಗಿರಬಹುದಲ್ಲವೇ?

* * *

ಕೇರಳದ ಸರ್ಕಾರದ ದ್ವಿತೀಯಾ ಪಂಚವಾರ್ಷಿಕ ಯೋಜನೆಗೆ ಕೇಂದ್ರ ಸರ್ಕಾರಕ್ಕಿಂತ, ರಷ್ಯಾಸರ್ಕಾರ ಹೆಚ್ಚು ನೆರವಾಗುತ್ತೆಂಬುದು ಶುದ್ಧಸುಳ್ಳಂತೆ.

* * *

ಡಕಾಯಿತರನ್ನು ಬಂಧಿಸಲು ಅನುಕೂಲವಾಗುವಂತೆ ಭಾರತಕ್ಕೂ ಪಾಕಿ ಸ್ತಾನಕ್ಕೂ ಒಂದು ಯೋಜನೆ ಏರ್ಪಾಡಾಗುವುದಂತೆ.

—ಹಲವಾರು ಹಿರಿಯ ರಾಜಕಾರಣಿಗಳಿಗೆ ಇದು ತಲೆನೋವು ತಂದಿದೆಯಂತೆ.

* *

ಘಣರಾಜ್ಯದ ಸ್ವಾತಂತ್ರ್ಯೋತ್ಸವವನ್ನು ಘಣತಂತ್ರ ಪರಿಷತ್ತಿನವರು ಒರಿಸ್ಸಾ ದಲ್ಲಿ ಅಮೋಘವಾಗಿ ಆಚರಿಸಿದರೆಂಬುದು ನಿರಾಧಾರವಾದುದಂತೆ.

—o—

ಉರಿಗಾಳು

ಜಟ್ಟಿ ಬಿದ್ದದ್ದು ಮಟ್ಟಿಯ ತಪ್ಪು, ಅಂತ ಚುನಾವಣಾ ಪರಾಜಿತ ಮಹನೀಯರ ಮಹಾ ಸಮ್ಮೇಳನ ನಿಶ್ಚಯಿಸಿದೆಯಂತೆ.

*　　　*　　　*

ಚುನಾವಣಾ ಫಲಿತಾಂಶಗಳು ಹೊರಬಿದ್ದಂತೆಲ್ಲ, ವೋಟರು ಮಹಾಶಯರುಗಳು ಕೈಕೈಹಿಸುಕುತ್ತಿದ್ದರಂತೆ... ಇನ್ನೂ ನಾಲ್ಕೈದು ಜನ ಉಮೇದುವಾರರು ನಿಂತಿದ್ದರೆ, ಅವರನ್ನೂ ಸೋಲಿಸಿ ಪಾಠ ಕಲಿಸಬಹುದಾಗಿತ್ತು, ಅಂತ.

*　　　*　　　*

ಮೀಸೆಗೆ ಮಣ್ಣಾಗದೆ, ಚುನಾವಣೆಯಲ್ಲಿ ಗೆದ್ದವರು, ಕೇವಲ ಹಲವರು ಮಾತ್ರ (ಭಾಷಣ)....ಮಹಿಳೆಯರಿರಬೇಕು.

*　　　*　　　*

ಅಣುಸ್ಫೋಟಕ ಶಕ್ತಿಯನ್ನುತ್ಪಾದಿಸಬಲ್ಲ ವಿಶೇಷ ವಸ್ತು ದೊರೆಯುವುದೂ ಕೇರಳ ರಾಜ್ಯದಲ್ಲೇ!....ಕಮ್ಯೂನಿಸ್ಟ್ ಪಕ್ಷಕ್ಕೆ ಬಹುಮತ ದೊರೆತಿರುವುದೂ, ಅಲ್ಲೇ ಇದು ಗಮನಾರ್ಹವೆ?

*　　　*　　　*

ಒಂದಾಣೆ, ಎರಡಾಣೆ, ಎಂಟಾಣೆ, ಹತ್ತುಕಾಸು, ಎಂದು ಹೇಳುವುದೇ ವಾಡಿಕೆಯಾಗಿರುವ ಕನ್ನಡನಾಡಿನವರನ್ನು, ಒಂದು ನಯಾಪೈಸಾ, ಎರಡು ನಯೆಪೈಸೆ, ಎಂಟು ನಯೆಪೈಸೆ, ಎಂದು ಹೇಳುವಂತೆ ಒತ್ತಾಯಪಡಿಸುವುದು, ಹಿಂದೀಪ್ರಚಾರಕ್ಕೆ ಕೊಡಲಿ ಪೆಟ್ಟು, ಎಂದು ಹಿಂದೀಪ್ರೇಮಿಗಳು ಸರ್ಕಾರಕ್ಕೆ ಮನವಿಮಾಡಿಕೊಂಡಿದಾರಂತೆ.

*　　　*　　　*

ಟಿಕೇಟು ಪಡೆದಾಯಿತು, ಬಹಳ ಕಷ್ಟಪಟ್ಟು! ಜಾಗಾನೂ ಗಳಿಸಿದ್ದಾಯಿತು, ಅದಕ್ಕಿಂತ ಕಷ್ಟಪಟ್ಟು!....ಇನ್ನು, ಗಂಟಿನ ಯೋಚನೆ.

*　　　*　　　*

ಸಿನಿಮಾ ಹಾಡುಗಳನ್ನ ಯುವಕ ಯುವತಿಯರು ಸಿನಿಮಾಗಳಲ್ಲಿ ಮೆಚ್ಚುತ್ತಿಲ್ಲ; ರೇಡಿಯೋದಲ್ಲಿ ಕೇಳಲು ಬಯಸುತ್ತಾರೆ....ಇದರ ಗುಟ್ಟೇನೆಂದರೆ, ಸಿನಿಮಾತಾರೆಯರ ಅವಲಕ್ಷಣ ರೂಪು ; ಹಾಡುವಾಗ, ಅವರ ಮುಖಗಳಿಗಾಗುವ ವಿಕಾರ, ಎಂದು ಮನಶ್ಶಾಸ್ತ್ರಜ್ಞರೊಬ್ಬರು ಕಂಡುಹಿಡಿದಿದಾರೆ.

*　　　*　　　*

ಕನ್ನಡದಲ್ಲೇ ಕಾಲೇಜುಗಳಲ್ಲಿ ಪಾಠ ಪ್ರವಚನಗಳನ್ನು ನಡೆಯಿಸುತ್ತಾರೆ, ಎಂಬ ಸುದ್ದಿಯನ್ನು ಕೇಳಿ, ಶುದ್ಧ ಇಂಗ್ಲೀಷ್ ಪ್ರೇಮಿಗಳೆಲ್ಲರೂ ತುಂಬಾ ಹರ್ಷ ಚಿತ್ತರಾಗಿದಾರಂತೆ.

* * *

ಸಿನಿಮ ಎನ್‌ಸೈಕ್ಲೋಪೀಡಿಯಾ ಒಂದನ್ನು ಪಾಶ್ಚಾತ್ಯರು ಹತ್ತು ಸಂಪುಟಗಳಲ್ಲಿ ಪ್ರಕಟಿಸುತ್ತಾರಂತೆ....ಸರಿ! ಮಾವಂದಿರು ಇನ್ನು ಅದನ್ನೂ ಕೊಂಡು, ಮದುವೆಗಳಲ್ಲಿ ವರೋಪಚಾರ ಮಾಡಲೇಬೇಕಾಗಿ ಬಂತು.

* * *

ಸುಪ್ರಸಿದ್ಧ ಕನ್ನಡ ಸಾಹಿತಿ ಒಬ್ಬರು, ಹೊಸ ಕಾದಂಬರಿಯೊಂದನ್ನು ಬೃಹದ್ರೂಪದಲ್ಲಿ ರಚಿಸಿ, ಹಾದರಪೂರ್ವಕವಾಗಿ ಕನ್ನಡ ತಾಯಿಗೆ ಅರ್ಪಿಸುವರಂತೆ.

* * *

ವಿಧಾನಸೌಧ ವಿಚಾರಣಾ ಸಮಿತಿಯ ವರದಿಯನ್ನು ಮಹಾಚುನಾವಣೆಯ ಮೊದಲೇ ಪ್ರಕಟಿಸಿದ್ದರೆ, ಕನ್ನಡ ನುಡಿಗೆ ಇನ್ನೂ ಅನೇಕ ಹೊಸ ಶಬ್ದಗಳು ದೊರೆಯುತ್ತಿತ್ತಲ್ಲಾ, ಎಂದು ವಾಂಗ್ಮಯ ಪ್ರಿಯರೊಬ್ಬರು ಕೊರಗುತ್ತಿದಾರೆ.

* * *

ಕೆಟ್ಟು ಪಟ್ಟಣ ಸೇರು,, ಎಂಬ ಗಾದೆಯನ್ನು, ಈ ಮಹಾಚುನಾವಣೆ, ಕೊಟ್ಟು ಪಟ್ಟಣ ಸೇರು, ಅಂತ ಬದಲಾಯಿಸಿಬಿಟ್ಟಿದೆಯಲ್ಲವೆ?

* * * * * * * * * * * * * * * *

ಸೊಳ್ಳೆ ಕಚ್ಚಿದಾಗ ವಿಜ್ಞಾನಿಯ ಮುಂಗೈ ಟೊಮೇಟೋಹಣ್ಣಿನಂತೆ ಉಬ್ಬಿ ಕೆಂಪಾಯ್ತಂತೆ.

—ಈಗ ವಿಜ್ಞಾನಿಯು ದಿಟವಾದ ಟೋಮೇಟೊಗಳನ್ನು ಅಂತಹ ಸೊಳ್ಳೆಗಳಿಂದ ಕಚ್ಚಿಸಿ, ಉಬ್ಬಿದ ಕೆಂಟೊಮೇಟೊಗಳನ್ನು ಅಧಿಕ ಬೆಲೆಗೆ ಮಾರಿ ಹಣವಂತನಾಗಲು ಯೋಜನೆ ಹೂಡಿದ್ದಾನಂತೆ.

* * *

"ನೀನು ಚುನಾವಣೇಲಿ ಗೆದ್ದಿರಬಹುದು ಕಣೇ! ಆದರೆ ಅಲ್ಲಿ ಖರ್ಚಿನ ಲೆಕ್ಕ ಕೊಟ್ಟಂತೆಯೇ, ಈ ತಿಂಗಳ ಮನೇಲೆಕ್ಕವನ್ನೂ ಸುಳ್ಳುಸುಳ್ಳಾಗಿ ಕೊಡ್ತಿದೀಯಲ್ಲೇ! ಇದು ನ್ಯಾಯವೇನೇ" ಎಂದು ಗಂಡನೊಬ್ಬ ಗೋಗರೆದನಂತೆ!

* * *

ಬಾನುಲಿಯ "ವಿನೋದ ವಾರ"ದಲ್ಲಿ ಜನರು ಅತ್ತಷ್ಟು ಹಿಂದೆಂದೂ ನಡಿದಿರ ಲಿಲ್ಲವೆಂಬುದು ಖಂಡಿತವಲ್ಲವಂತೆ.

★ ಒಂದು ಮಹೋಪಮೆ ★

(ಬೀರಪ್ಪ ಪುರಾಣದಿಂದ)

ಎಮ್ಮೆಸ್ಸಿ ಎನಿಸುವನ್ನೆಗಂ ಎನಗಸಹ್ಯಮೀ ವಿವಾಹಂ
ಎಂದನುದ್ಘಟಿತನದಾವೇಶದುತ್ಸಾಹದಿಂ ಪ್ರಕ್ಷುಬ್ಧಪ್ರಭಾವ ಪ್ರವಾಹೋ
ನ್ಮೀಲಿತ ನಯನಾಂತರ್ಗತವಹ್ನಿಜ್ವಾಲಾಪೀಡಿತ ವಿನ್ಯಾಸಸಂನ್ಯಾಸದಿಂ—
ಬೀರಪ್ಪ!....(ಇದಕ್ಕೆ ಮಹೋಪಮೇ ಈ ರೀತಿ ಬರುತ್ತೆ)....
ಉದ್ಯಾನವೊಂದರಲಿ ಸಸ್ಯಶಿಶುಪಾಲ ಮಾಲೀಕ ಪ್ರೀತಿವಾತ್ಸಲ್ಯಪೂರ್ಣಹೃದಯದಿಂ
ಅಂಕುರಿಸಿ ಸಿಂಪರಿಸಿ ಮುಳ್ಳುಬೇಲಿಯ ಪಂಜರದಿ ವನ ಶುಕನಂತೆ ಪೋಷಿಸಿದ
ಮಾವಿನಾಮರದಲ್ಲಿ, ಕೊಂಬೆಕೊಂಬೆಗಳ ಸಂಖ್ಯಾತವಾವಿರ್ಭವಿಸಿ
ಎಣ್ದಿಸೆಗೆಸೆವ ಕರಂಗಳಂ ಪೂಣ್ದು ಪರ್ಣಲಕ್ಷೋಪಕ್ಷಗಳುನೇಸರಮೃತವನುಂಡು
ಬುವಿಯ ತಂಪನು ಹೀರಿ ನಡುನಡುವೆ ಹೂಬಿಟ್ಟು, ಹೀಚಾಗಿ
ತೂಗುಗೊಂಚಲ ಮೂಕಮಂಚದಲಿ ಕಾವುಂಡು ಸ್ವಾಪುಂಡು ಬಲಿತು ಬೆಳೆದು
ಆ ಗೊಂಚಲಂಚಿನಲಿ ರಂಜಿಸುವುದೊಂದೆ ಫಲ, ಉಳಿದರನು ಕೆಳಕೆಡಹಿ!—
ಆಂಗ್ಲ ಚಕ್ರವರ್ತಿನಿಯ ಮಣಿಮುಕುಟ ಕಿರೀಟ ಮಧ್ಯದಲಿ ಹೊಳೆಹೊಳೆವ
ಕೊಹಿನೂರಿನಂತೆ—
ಆ ದೊಡಮಾಗಾಯಿ ಹಸುರುಮುದ್ದೆಯ ರತ್ನ—ಆ ರತ್ನವನು ಮಡಿಲಲ್ಲಿ ಮಲಗಿಸಿ
ಮುದ್ದಿಡುವಾಸೆ ಭೂಮಾತೆಯಂತರಂಗದಲಿ ಮೂಡಿ ಬರೆ, ಬಾರೆಂಬ ನೆಲದಕರೆ,
ಬೀಳೆಂಬ ತಳದಕರೆ, ಆ ಕರೆಗೆ ಕಿವಿಗೊಡದೆ, ತೊಟ್ಟ ಫಟ್ಟನೆ ಹಿಡಿವ
ಫಲದ ಛಲ!—"ನಾನೊಲ್ಲೆ ನೀಗಲೇ! ಇಲ್ಲೆ ಓಲಾಡುವೆನು ಡೋಲಾಯಮಾನದಿಂ",
ಅಲ್ಲೆ ಶಾಖಾಸನದಿ ತೂಗುತೇಳುತ ಕಾಯಿ, ಬಿಸಿಲಿಂಗೆ ಬೃಹತ್ತಾಗಿ, ಗಾಳಿಬೀಸಾಟಕ್ಕೆ
ತೋಳ್‌ತೆಕ್ಕೆಯನಿತ್ತು,—ಒಗರೆಲ್ಲ ಹುಳಿಯಾಗಿ,....ಹುಳಿಯೆಲ್ಲ ಸಿಹಿಯಾಗಿ,—
ಒಳಗೆಲ್ಲ ರಸತುಂಬಿ, ಜೇನ ಫೇನಗಳುಕ್ಕಿ,
ಹಣ್ಣಾದಮೇಲೆಯೆ ಮಣ್ಣಿಗುದುರೆವೆ ನಾನು,
ಆಗ, ನೀನಾಹ್ವಾನಿಸದೆಯೆ, ಸ್ವಾಗತವನೀಯದೊಡೆಂ, ಒತ್ತಾಯವಮಾಡದೊಡಂ,
ನಾನೆ ನಿಶ್ಚಿತನನಾಗಿ, ಅಂತಃಪ್ರೇರಣಾಸ್ಫುರಣದುನ್ಮೇಷದಾಕರ್ಷಣೆಯಿಂ
ಬೀಳುವೆನು ನೆಲಕೆಂದು, ನುಡಿಯುವಾ ಮಾವಿನಕಾಯಮೋಡಿಯಲಿ,
ಹೇಳಿದನು, ಬೀರಪ್ಪ,
"ಎಮ್ಮೆಸ್ಸಿ ಮಗಿದೊಡನೆ, ಮದುವೆ," ತನಗೆಂದು

— ನಾ. ಕಸ್ತೂರಿ.

[ಆಕಾಶವಾಣಿ 'ವಿಕಟಕವಿ ಗೋಷ್ಠಿ'ಯಲ್ಲಿ ಓದಿದ್ದು]

ನಯೆ ಪೈಸ

ಒಂದು ಕಾಸಿಗೂ ಎರಡು ಕಾಸಿಗೂ ಒಂದೊಂದೇ ಪೈಸಾ
ಈಗ ಬಂತೊ, ಹೊಸ ಪೈಸ

ಹದಿನಾರಾರಲ ನೂರು ಎಂಬೊ ಪ್ಲಾಟ್‌ಫಾರಂ ಪೈಸಾ
ಒಂಬತ್ ಕಾಸಿನ ಟಪಾಲ್ ಕಾರ್ಡಿಗೆ ಐದೈದೇ ಪೈಸಾ
ಒಂದೋರಾಣೆ ರಿಪ್ಲೈ ಕಾರ್ಡಿಗೆ....? ಪಟ್ಟಿ ನೋಡ್ಬೇಡಿ
ಅಲ್ಲಿ ಒಂಬತ್ತೇ ಪೈಸ!—
ಕೊಡಿ ಇನ್ನೂ ಒಂದು ಪೈಸ

ಎರಡಾಣೆ ಕೊಟ್ರೆ ಟಪಾಲ್‌ನೋರೊಂದು ಕವರ್ ಕೊಡ್ತಿದ್ರು!
(ಪಟ್ಟಿ ನೋಡಿ! ಎರಡಾಣೆಗೆ ಹನ್ನೆರಡೇ ಪೈಸಾ)
ಲೆಕ್ಕಾಚಾರ, ಅಂಚೆ ಕವರು ಬೇಕಾದ್ರೆ ನಿಮಗೆ
ಹದಿಮೂರೇ ಪೈಸಾ!
ಕೊಡಿ ಇನ್ನೂ ಒಂದು ಪೈಸಾ

ಒಂದೂವರಾಣೆ, ನಮಗೂ ನಿಮಗೂ, ಚೀಟಿ ನೋಡ್ರಪ್ಪ
ಒಂಬತ್ರಂತೆ ನಯೇ ಪೈಸೆ,....ಕಾನೂನ್ ಹೇಳ್ತದೆ
ಪೇಪರ್ನೋರು ಮಾತ್ರ ತೆಪ್ಪಗೆ, ಕಿತ್ತರು ಜೋಬಿಂದ
ಹತ್ ಹತ್ತೇ ಪೈಸಾ
ಕೊಡಿ ಇನ್ನೂ ಒಂದು ಪೈಸ!

ಹನಿ, ಹನಿ, ಕೂಡಿಸಿ ನಮ್ಮನು ಹಳ್ಳಕೆ ತಳ್ತಾರೆ
ದನಿಗ್ ದನಿ, ಕೂಡಿಸಿ ನಾವು ಪೈಸ ಉಳಿಸೋಣ.

—ಪಟ್ಟಾಭಿ.

ದಫೆದಾರ್ ದೇರಣ್ಣೋರು

"ನರಭಕ್ಷಕ"

ಕಟ್ಟಕಡೆಯ ಪಕೋಡವನ್ನು ಆನಂದವಾಗಿ ಅಗಿದರು—'ಅಯ್ಯೋ ನುಂಗ ಬೇಕಲ್ಲಾ, ಕಂಪು ಬಾಯಿಂದ ಮಾಯವಾಗುವುದಲ್ಲಾ' ಎಂಬ ವ್ಯಥೆ ಒಂದುಕಡೆ, ಅಗಿದಂತೆ ನುಂಗಿದಾಗ ಹೊಟ್ಟೆ ಬಿಮ್ಮೆನ್ನುವ ತೃಪ್ತಿಯೊಂದುಕಡೆ, ಹೀಗೆ ಕಷ್ಟದಲ್ಲಿ ಸುಖ ಕಾಣುತ್ತಿದ್ದರು ದ|| ದೇರಣ್ಣೋರು.—ಕಡೆಗೊಮ್ಮೆ ಅನಿವಾರ್ಯವಾಗಿ ನುಂಗಿ ಥಳಥಳಿಸುತ್ತಿದ್ದ ಕಂಚಿನ ತಂಬಿಗೆಯನ್ನೆತ್ತಿ ಒಂದೇಸಮ ಗಟಗಟನೆ ನೀರನ್ನು ಗಂಟಲಿಗೆ ಸುರಿದುಕೊಂಡರು. ಬಲಗೈಯನ್ನು ನೀರಿನಲ್ಲಿ ಅದ್ದಿ ಹುಬ್ಬನ್ನೇರಿಸಿ ಕಣ್ಣನ್ನು ಮುಚ್ಚಿ ಮೀಸೆಯನ್ನು ಒರಸಿಕೊಂಡರು. ಹೊಟ್ಟೆಯನ್ನು ಬಿಗಿದ ಬೆಲ್ಟನ್ನು ಸಡಿಲಿಸಿದರು. ಇದಷ್ಟು ಕೆಲಸ ಸಾಂಗೋಪಾಂಗವಾಗಿ ನೆರವೇರುವತನಕ ಅವರು ತದೇಕಚಿತ್ತರಾದ ಪಿಶಾತ್ಮಜನಂತೆ ಇರುತ್ತಿದ್ದರು. ಸೊಗಸಾದ ಪಕೋಡದ ಕಂಪನ್ನು ಹೊತ್ತುತಂದ ತೇಗೊಂದು ಹೊರಹೊಮ್ಮಿತು. ಮರುಕ್ಷಣವೇ ಆ ಕಂಪಿಗೆ ಮಾರುಹೋದ ಮಾರುತಿ ರಾಯರಂತೆ ಮುಖ ಅರಳಿದ ಮುತ್ತುಗದ ಹೂವಾಯಿತು. ಶ್ರೀಯುತರು ನಕ್ಕರು. ನಾನು ಕಿವಿ ಸರಿಪಡಿಸಿಕೊಂಡು ಕುಳಿತೆ—ಅವರ ವಾಕ್‌ಝುರಿ ಆಲಿಸಲು.

"ನರಭಕ್ಷಕ" ಎಂದರು. ನರಿಯಂತೆ ಮುದುಡಿತು ಅವರ ದೇಹ. ನಸು ಅರಳಿದ ಗುಲಾಬಿಯ ಗೊಂಚಲು ನಗುತ್ತಾ ಬಂದಿತೇನು? ಅಲ್ಲ ಸೌ|| ಸಾವಂತ್ರಮ್ಮನವರು ಒಳಗಿಂದ ಹಂಸದಂತೆ ನಡೆದುಬಂದರು. ದಫೆದಾರ್ರು ಡಂಗುಬಡಿದ ಕೋಡಂಗಿಯಂತೆ ಬಿಟ್ಟಬಾಯಿ ನೆಟ್ಟಕಣ್ಣಿಂದ ದೃಷ್ಟಿಯಾಗುವಂತೆ ಆ ಚೆಲುವೆಯನ್ನು ನೋಡುತ್ತಾ ಕುಳಿತರು. ನಿಜಕ್ಕೂ ದೇರಣ್ಣ ಪುಣ್ಯವಂತ ಇಂತಹ ಸುಂದರ ಹೆಂಡತಿ—ಪ್ರೀತಿಯ ಮಗ ಪಡೆದಿದ್ದಾರೆ.

"ಕೂಸು ಮಲಗಿದೆ. ಎದ್ದರೆ ತೂಗಿ....ಅತ್ತರೆ ಅಡಿಗೆಮನೇಲಿ ಹಾಲಿದೆ" ಎಂದು ಹೇಳಿ ಕಳಿತ ಟೊಮೋಟೋವಿನಂತೆ ನಕ್ಕು ಹೊರಟುಹೋದರು ಸೌ|| ಸಾವಂತ್ರಿ.

ಬಳುಕುವ ಬಳ್ಳಿಯಂತೆ ನಡೆದುಹೋದ ಸಾವಂತ್ರಮ್ಮನವರನ್ನೇ ನೋಡುತ್ತಾ ಹೇಳಿದರು—

"ನರಭಕ್ಷಕ"

"ಯಾರು?"

"ಅವಳೇ"

"ಹಹ್ಹ....ಏನು ಹೀಗೆ ಹೇಳ್ತಿದ್ದೀರಿ ದಫೆದಾರ್ರೆ"

"ನನ್ನನ್ನ ಪೂರ್ತ ತಿಂದುಹಾಕಿದ್ಭಾಳೆ ಆಕೆ........ಅವಳು ಜೀರ್ಣಿಸಿಕೊಂಡು ನನ್ನನ್ನ ಹೀಗೆ ಆಟ ಆಡಿಸ್ತಿದ್ದಾಳೆ"

"ಅಲ್ಲ–ದಫೆದಾರ್ರೇ....ಹೊಳಲ್ಕೆರೆ ಸುತ್ತಮುತ್ತ ಸೇರ್ಕೊಂಡು ದನಗಳನ್ನ ಬಿಟ್ಟ್ಬಿ ಜನಗಳನ್ನೇ ಆರಿಸಿಕೊಂಡು ತಿನ್ನುತ್ತಿದ್ದ—ನರಭಕ್ಷಕ ಹುಲಿ ವಿಚಾರ ಹೇಳ್ತೀನಿಂತ ಕರೆಸಿದಿರಿ –ಹೇಳ್ತಿರೋದು ಸಾವಂತ್ರಮ್ಮನವರ ವಿಚಾರ".

"ಅವಳೂ ಯಾವ ಹೆಣ್ಣುಹುಲಿಗೂ ಕಡಿಮೆ ಇಲ್ಲಾನ್ನಿ...."

"ಆಂ....ದಫೆದಾರ್ರಿ—ನರಭಕ್ಷಕ ಹುಲಿಗಳು ಅಂದ್ರೇ—ಅವು ಈ ಸರ್ಕಸ್ಸಿನ ಹುಲಿ ಹಾಗೆ ತಾನೆ ಇರುತ್ವೆ?"

"ಛೆ—ಅದರ ರೂಪೇ ಒಂದು ನಮೂನಿ ವಿಚಿತ್ರವಾಗಿ ಹೋಗಿಬಿಡುತ್ತೆ........ ಕೆಲವರು ನರಭಕ್ಷಕ ಅಂದ್ರೆ ನರ ಇರುತ್ತೆ ನೋಡಿ....ಅದೇ ನರಗಳೂ....ಮೈಯ್ಯಲ್ಲಿ ಇರೋಲ್ವೆ ನರನಾಡಿಗಳೂಂತ ಅಂತಹ ನರಗಳನ್ನೇ ದನಗಳ ಮೈಯಿಂದ ಆರಿಸಿ ತಿನ್ನೋ ಹುಲಿಗಳು 'ನರಭಕ್ಷಕ' ಅಂತ ಅಂತಾರೆ ....ಅದು ತಪ್ಪುತಿಳುವಳಿಕೆ ನರ ಅಂದ್ರೆ ನರ—ನರಪೇತಲ—ನರಂಮನುಷ್ಯ—ನರಸಿಂಹ...."

"ನರಸಿಂಹ?"

"ಅವನ್ನೇ ಆ ಹುಲಿ ಹಿಡಿದದ್ದು–ಅದರ ಬಾಯಿಂದ ಅವನನ್ನ ಬಿಡಿಸಬೇಕಾದ್ರೆ ಸಾಕುಸಾಕಾಗಿಹೋಯ್ತು"

"ಓಹೋ ನರಸಿಂಹನ್ನೇ ಭಕ್ಷಮಾಡ್ತಿತ್ತು ಆ ವ್ಯಾಘ್ರ ಅನ್ನಿ...."

"ನಾನು ಅವನ ಜೊತೆಗಿಲ್ದೆ ಇದ್ದಿದ್ರೆ ಅವನು ಎಂದೊ ಹರೋಹರ ಆಗ್ತಿದ್ದ.... ನೀವು ಹುಲಿ ವೇಷದ ಕತ್ತೆ ಕಥೆ ಕೇಳಿದ್ದೀರೋ"

"ಓಹೋ....ಒಂದನೇ ಕ್ಲಾಸಲ್ಲೇ ನಮ್ಮ ಮೇಸ್ಟ್ರು ಹೇಳಿದ್ದರು...."

"ನಾನು ಅದರ ನೀತಿಯನ್ನೇ ಹಿಡಿದು ಕೊಂಚ ಬುದ್ಧಿವಂತಿಕೆ ಉಪಯೋಗಿಸಿ ಕೂಗದೆ ಕೆಲಸ ಸಾಧಿಸಿದೆ"

"ಅರ್ಥವಾಗಲಿಲ್ಲ"

"ಕತ್ತೆ ವೇಷದ ಹುಲಿ ಕಥೆ ಮಾಡಿದೆ...."

"ಹ ಹ್ಹ....ಸಮಯಸ್ಫೂರ್ತಿ ಇರಬೇಕು...."

"ಛೆ ...ಅದು ಕೇವಲ ಸಾಮಾನ್ಯ ಅನುಭವದ ಪ್ರದರ್ಶನ....ಕಾಮನ್‌ಸೆನ್ಸ್‌ನ ಫಲ....ಹೊಳಲ್ಕೆರೆ ಸುತ್ತಾಮುತ್ತ ಒಂದು ನರಭಕ್ಷಕ ಸೇರಿಕೊಂಡು ವಿಪರೀತ ಹಾವಳಿ ಪ್ರಾರಂಭಿಸಿಬಿಟ್ಟಿತ್ತು....ಸಂಜೆಯಾದರೆ ಜನ ಹೊರಗೆ ಹೋಗೋಕೆ ನಡುಗೋರು ..."

"ನೀವು ಇಷ್ಟೊಂದು ಶಿಕಾರಿ ಮಾಡಿದೋರು ಅದನ್ನ ಹೊಡೆದುಹಾಕೋದು ಕಷ್ಟವಾಗಿತ್ತೆ?"

"ಅದೇ ಅನುಭವವಿಲ್ಲದ ಮಾತು. ಸಾಧಾರಣ ದನಭಕ್ಷಕ ವ್ಯಾಘ್ರಗಳನ್ನು ಕಣ್ಣುಮುಚ್ಚಿಕೊಂಡು ಶಿಕಾರಿಮಾಡಬಹುದು....... ಇದು ನರಭಕ್ಷಕ ಅನ್ನೋದು ನೆನಪಿನಲ್ಲಿರಲಿ. ಇದಕ್ಕೆ ಬ್ಯಾಟಿ ಏನು ಕಟ್ತೀರಾ....ಹೇಳಿ?...."

"ಬ್ಯಾಟೀ....ಅಂದರೇ...."

"ಅದೇ ಗೊತ್ತಿಲ್ಲ ನಿನಗೆ........ಬೇಟೆ ಕುರಿ ಅಥವ ಮೇಕೆ ಅಥವ ಕತ್ತೆಯನ್ನ ಕಟ್ಟಿಹಾಕಿ ಅದರ ಹತ್ತಿರದ ಮರದಮೇಲೆ ಮೊರಸು ಹಾಕಿ ಕಾದಿರೋದು....ಸುಲಭ ವಾಗಿ ಸಿಕ್ತ ಬೇಟೆ ಅಂತ ಆ ಹುಲಿಗಳು ಬಂದಾಗ ನಾವು ಮೇಲಿಂದ ಗುಂಡಿಟ್ಟು ಡುಂ ಅನ್ನಿಸಿ ಕೊಂದು ಹಾಕೋದು........ಇದು ಮಾಮೂಲಿ ಹುಲಿ ಶಿಕಾರಿಯ ಸಂಪ್ರದಾಯ....ಆದರೆ ಇದು ನರಭಕ್ಷಕ ಅಂದಮೇಲೆ ಯಾರನ್ನ ಯಜ್ಞಪಶುವನ್ನಾಗಿ ಆರಿಸುವುದು... ಈಗಿನ ಕಾಲದಲ್ಲಿ ಯಾವ ಶುನಶ್ಶೇಪ ಸಿಕ್ತಾನೆ? . "

"ಅಂದರೇ ಮನುಷ್ಯಪ್ರಾಣಿಯನ್ನೇ ಬಲಿಯಾಗಿ ಕಟ್ಟಿಹಾಕಿ ಅದನ್ನ ಗುಂಡಿಟ್ಟು ಕೊಲ್ಲಬೇಕೂನ್ನಿ....

"ಮತ್ತೇ....ಅಲ್ಲವೇ. ಈ ನರಮಾಂಸದ ರುಚಿ ಕಂಡ ಹುಲಿ ಬೇರೆ ಯಾವ ಪ್ರಾಣಿಯನ್ನೂ ಮುಟ್ಟಲ್ಲ. ಅದಕ್ಕೆ ಅಸಲ್ ನರಪ್ರಾಣಿಯೇ ಬೇಕು ಪ್ರಯೋಗಾರ್ಥ ವಾಗಿ ನಾನು ನಮ್ಮ ಪೂರ್ವಿಕರೆಂದು ಪ್ರತೀತಿಯಿರುವ ವಾನರನನ್ನು ಬೇಟೆಯಾಗಿ ಬಂಧಿಸಿಟ್ಟು ಹೊಂಚುಹಾಕಿದೆ. ಉಹುಂ-ಅದು ಮುಟ್ಟಲಿಲ್ಲ. ಮೂಸಿನೋಡಿ 'ಥತ್' ಎಂದು ಎರಡು ಕೂಗು ಹಾಕಿ ಆರ್ಭಟಿಸಿ ಹೊರಟುಹೋಯಿತು .. "

"ಹುಂ....ಸರಿ ಆಮೇಲೆ"

"ಆ ಮೇಲೆ ನಮ್ಮ ಶಾನುಭೋಗರು ಒಂದು ಉಪಾಯ ಹೇಳಿದರು....ನಮ್ಮ ಕೇರಿಯ ಹನುಮಂತರಾಯನ್ನ ಯಾಕೆ ಬ್ಯಾಟೆಯಾಗಿ ಕಟ್ಟಬಾರದೂಂತ— ಯಾಕೇಂತಿರೋ ಅವನು ಮನುಷ್ಯಜಾತಿ ಮೃಗ—ಹೆಂಡ್ತೀನ್ನ ದನಹೊಡೆದಹಾಗೆ ರಾಚೋನು—ಮಕ್ಕಳ ಮೂಳೆಗಳೆಲ್ಲಾ ಪುಡಿಪುಡಿ....... ಅವನ ಹತ್ತಿರ ಜಗಳಕ್ಕೆ ಹೋದರೆ ಆಯ್ತು ಹುಲಿ ಹಾಗೆ ಎಗರಿ ಸದೆಬಡಿಯುವ— ಪ್ರೀತಿ-ವಿಶ್ವಾಸ ನಯ ನಾಜೂಕು ಕರುಣೆ-ಕಕಲಾತಿ-ಒಂದೂ ಕೇಳಬೇಡಿ... ಅಂಥಾ ಮನುಷ್ಯ ಊರಿನಲ್ಲಿ ಕಂಟಕವಾಗಿರೋಕಿಂತ ಹುಲಿ ಬಾಯಿಗೆ ಆಹುತಿ ಆಗೋದೇ ಮೇಲು ಅಂತ ತೀರ್ಮಾನಿಸಿ ಶಾನುಭೋಗರು ಈ ತೀರ್ಮಾನಕ್ಕೆ ಬಂದರು...."

"ಅರೆ! ಎಂಥಾ ಜನಾರೀ ನೀವೂ ಅನ್ಯಾಯವಾಗಿ ಆತನ್ನ ಬಲಿಹುಯ್ಯೋದೆ?"

"ಊರಿನ ಹಿತದೃಷ್ಟಿಯಿಂದ ನಾವು ಹಾಗೆ ಮಾಡದೆ ವಿಧಿಯೇ ಇರಲಿಲ್ಲ.... ಅನ್ಯಾಯವಾಗಿ ದನಾ ಕಾಯೋ ಹುಡುಗರು ಕಾಡಿನಲ್ಲಿ ಕಟ್ಟಿಗೆ ಕಡಿಯೋ ಕೂಲಿಗಳು

ಹುಲಿ ಪಾಲಾಗೋರು ... ಇಲ್ಲಿ ಕೇಳಿ ಮುಂದೆ....ಶಾನುಭೋಗರು ಹನುಮಂತನನ್ನು ಹಿಡಿದು ಕಾಡಿಗೆ ಒಯ್ದು ಹುಲಿಯು ಸುಳಿಯುತ್ತಿದ್ದ ಸುಮಾರು ಜಾಗದಲ್ಲಿ ಮರಕ್ಕೆ ಕಟ್ಟಿಹಾಕಿದರು........ರಾತ್ರಿ ಹನ್ನೆರಡೂವರೆಕ್ಕಾಲು ಘಂಟೆ ನಾನು ಮರದಮೇಲೆ ಬಂದೂಕು ಬಾರು ಮಾಡಿ ಕೂತಿದ್ದೀನಿ. ಕೆಳಗಡೆ ಹನುಮಂತರಾಯ ವದ್ರ್ಯಾಡ್ತಾ ಇದ್ದಾನೆ....ಹಸಿದ ಹುಲಿ ಆರ್ಭಟಿಸಿ ಬಂತು. ಏನು ಹೇಳ್ಲಿ ಅದರ ಕಥೇ....ಅದನ್ನ ನೋಡಿದಾಗ ಇದು ಹುಲಿಯೆ? ಅನ್ನೊಸಂದೇಹ ಬರುತ್ತೆ. ಮೈಮೇಲಿನ ಕೂದಲೆಲ್ಲಾ ಉದುರಿಹೋಗಿತ್ತು....ಮುಖದಲ್ಲಿ ವಿಚಿತ್ರವಾದ ಹುಚ್ಚುಕಳೆ— ಮನುಷ್ಯ ರಕ್ತದ ದಾಹ ಹೇಳತೀರದು....ಅದರ ಸ್ವಭಾವ ನೋಡಿ. ಅದು ಮನುಷ್ಯನ ರಕ್ತದ ರುಚಿ ಕಂಡಮೇಲೆ ಬೇರೆ ಯಾವ ಪ್ರಾಣಿಯನ್ನೂ ಮೂಸೋಲ್ಲ ... ಈ ಹುಲಿ ಬಂತು–ಹನುಮಂತರಾಯ ನನ್ನು ಮೂಸಿನೋಡಿತು.... . ಅವನೋ ಗಡಗಡ ನಡುಗುತ್ತಾ ಕಿರುಚಲೂ ಬಾಯಿ ಬಾರದೆ ಮೈ ಎಲ್ಲಾ ಬೆವತು ವಿಲಿವಿಲಿ ವದ್ರ್ಯಾಡುತ್ತಿದ್ದ"

"ಅಯ್ಯೋ ಪಾಪ"

"ಪಾಪವೇನು ಬಂತು....ಅವನಿಗೆ ಆಗ ಅರ್ಥವಾಗಿತ್ತು ತಾನು ಹೆಂಡ್ತಿನ್ನ ಸದೆ ಬಡಿಯುವಾಗ ಅವಳಿಗೆ ಹೀಗೇ ಕಾಣುತ್ತಿದ್ದೆನೆಂದು....ಇಲ್ಲಿ ಕೇಳಿ ಮುಂದೆ. ಆ ನರ ಭಕ್ಷಕ ಆಪಾದಮಸ್ತಕ ಹನುಮಂತರಾಯನನ್ನು ನೋಡಿತು. ಮುಖವನ್ನು ನೆಕ್ಕಿತು ....ಕತ್ತಿನ ಬಳಿ ಬಾಯಿಯಿಟ್ಟು ಗುಟುರು ಹಾಕಿತು...."

"ಆವಾಗ ನೀವು ಗುಂಡಿಕ್ಕಬೇಕಿತ್ತು"

"ಅರೆ! ಅದು ಹ್ಯಾಗೆ ಸಾಧ್ಯ—ಹನುಮಂತರಾಯ ಹತ್ತಿರಲೇ ಇದ್ದ— ಆಕಸ್ಮಾತ್ ಗುಂಡು ಅವನಿಗೆ ತಗುಲಿದರೆ ಅನ್ಯಾಯವಾಗಿ ಅವನು ಸಾಯೋಲ್ಲವೆ?"

"ಹ ಹ್ಹ .. ಚೆನ್ನಾಗಿದೆ ನಿಮ್ಮ ಮಾತು .. ಅಲ್ರೀ ಹುಲಿ ಬಾಯಿಗೇ ಅವನ್ನ ನೂಕಿದಮೇಲೆ ಆಕಸ್ಮಾತ್ ಗುಂಡು ತಗುಲಿದರೇನೀಗ...."

"ಅದೇ— ಕಾನೂನು ತಿಳಿಯದವರ ಮಾತು ನೀವು ಆಡ್ತಿರೋದು....ನಾನು ಗುಂಡಿಕ್ಕಿ ಆ ಹನುಮಂತರಾಯನ್ನ ಕೊಂದರೆ ಖೂನಿ ಕೇಸು ಹಾಕ್ತ್ಯಾರು ನನ್ನಮೇಲೆ ....ಆದರೇ ಅದೇ ಹುಲಿ ತಿಂದರೆ, ಹಾಗಲ್ಲ ನೋಡಿ ಅದು ಕೊಂದಹಾಗಾಯ್ತು ಅಲ್ಲವೆ? ಯೋಚನೆಮಾಡಿ ನೋಡಿ ಇದೆಲ್ಲಾ ಕಾಮನ್‌ಸೆನ್ಸ್ ವಿಚಾರ .. ಹೌದೋ ಅಲ್ಲವೊ "

"ಹೌದು ಹೌದು....ಆಮೇಲೆ?"

"ಆಮೇಲೆ ಕೇಳಿ....ಆ ಹುಲಿರಾಯ ದೂರ ಸರಿದು ನಿಂತಿತು ನೆಲ ಅಪ್ಪಳಿ ಸಿತು ...ಆರ್ಭಟಿಸಿ ನೆಗೆದು ಕೆರೆಯಕಡೆ ಲಂಘಿಸಿ ಬೇರೆ ಬೇಟೆಯನ್ನು ಹುಡುಕಿಕೊಂಡು ಹೊರಟುಹೋಯಿತು .. ಇದರಿಂದ ಎಂತಹ ಪರಿಸ್ಥಿತಿ ನಾವು ಎದುರಿಸಬೇಕಾಯ್ತು ಅನ್ನೋದನ್ನ ಆಲೋಚನೆಮಾಡಿ "

"ಹನುಮಂತರಾಯನ್ನ ನರಭಕ್ಷಕ ಭುಜಿಸಲೇ ಇಲ್ಲವೆ?"

"ಇಲ್ಲ. ಅದರ ಆರ್ಭಟದಲ್ಲೇ ನಾನು ಅರ್ಥಮಾಡಿಕೊಂಡೆ.... ಹನುಮಂತ ರಾಯ ನರನಲ್ಲಾ ಎಂದು. ಅವನಲ್ಲಿ ಪ್ರಾಣಿವರ್ಗದ ಗುಣಗಳೇ ಪ್ರಧಾನವಾಗಿದ್ದ ಕಾರಣ ಅವನನ್ನು ಅದು ಮುಟ್ಟಲಿಲ್ಲ. ಮರುದಿನ ಶಾನುಭೋಗರು ಬಂದಾಗ ಹನುಮಂತ ನಗುತ್ತಿದ್ದ. ಮತ್ತೆ ಅವನು ಮನೆ ಸೇರಿದಾಗ ಅವನ ಹೆಂಡತಿಯು ನಗು ಮಾಯವಾಗಿ ನರಭಕ್ಷಕನನ್ನು ಕಂಡಂತೆ ಬೆದರಿ ಮತ್ತೆ ಅತ್ತಳು...."

"ಸರಿ ಈ ಹುಲಿನ್ನ ಹ್ಯಾಗೆ ಕೊಂದಿರಿ ಕಡೆಗೆ ..."

"ಕೇಳಿ ಹೇಳ್ತಿನಿ .. ಊರಜನರೆಲ್ಲಾ ನನಗೇ ಮೊರೆ ಇಟ್ಟರು .. ನೀವೇ ಯಾಕೆ ಬೇಟೆಯಾಗಿ ಬಲಿ ಆಗಬಾರದೂಂತ ....ಆಮೇಲೆ ಷಿಕಾರಿ ಯಾರು ಮಾಡೋರು? ಅನ್ನೊ ಪ್ರಶ್ನೆ ಅಡ್ಡಬಂದು ಬೇರೆ ಉಪಾಯಕ್ಕಾಗಿ ನನ್ನ ಕಾಲಿಗೇ ಬಿದ್ದರು"

"ಅಂತೂ ಕಡೆಗೂ ನೀವೇ ಗತಿ ಅನ್ನಿ"

"ಮತ್ತೇ ...ನಮ್ಮ ನರಸಿಂಹ ಅವನಿಹಳ್ಳಿ ಹೆಣ್ಣು ಆಗಿರೋದು....ಹೊಸಗೆ ಆದ ಹೊಸಪರೀಲಿ ಹ್ಯಾಗೆ ಆಡುತ್ವೆ ಈ ಗಂಡುಗಳೂನ್ನೊದು ಗೊತ್ತಲ್ಲ. 'ಬ್ಯಾಡವೋ' ಅಂತ ಅಂಗಲಾಚಿದಳು ಅವನ ಅಮ್ಮ. ಇವನು ಕೇಳಲಿಲ್ಲ ರಾತ್ರಿ ಹೆಂಡ್ತಿ ಇರೋ ಹಳ್ಳಿಗೆ ಹೊರಟೇಬಿಟ್ಟ. ನರಭಕ್ಷಕ ಹುಲಿರಾಯನಿದ್ದ ಕಾಡಿನ ಮುಖಾಂತರವೇ ಅವನಿಹಳ್ಳಿಗೆ ಹೋಗಬೇಕು ಅವ. ಅವರಮ್ಮನ ಗೋಳು ನೋಡಲಾರದೆ ನಾನು ಬಂದೂಕು ಹೆಗಲಿಗೇರಿಸಿ ಅವನ ಮೈಗಾವಲಾಗಿ ಹಿಂದೆಬಿದ್ದೆ. ಅವನಿಗೆ ನರಭಕ್ಷಕ ಹುಲಿರಾಯನ ಸ್ವರೂಪವನ್ನು ವಿವರಿಸಿದಾಗ ಅರ್ಧ ಕಾಡು ದಾಟಿದಮೇಲೆ ಹಿಂದಿರು ಗುವ ಸಲಹೆಮಾಡಿದ. ನಾನು ಅವನನ್ನೇ ಬೇಟೆಯನ್ನಾಗಿ ಮಾಡಿ ಯಾಕೆ ಆ ನರ ಭಕ್ಷಕನನ್ನು ಕೊಲ್ಲಬಾರದು? ಎಂದು ಯೋಚಿಸಿದೆ. ಜೊತೆಗೆ ನನ್ನ Shooting Kitನ ಜೊತೆ ಒಂದು ಕತ್ತೆ ಚರ್ಮವೂ ಇತ್ತು...."

"ಕತ್ತೆ ಚರ್ಮ?.... ಅದ್ಯಾತಕ್ಕೆ"

"ಆತುರ ಬೇಡ ಕೇಳಿ .. ದೂರದಿಂದ ಆ ಹುಲಿಯ ಘರ್ಜನೆ ಕೇಳಿಸಿತು. ತಡ ಮಾಡಿದರೆ ಇಬ್ಬರನ್ನೂ ಆ ಕ್ರೂರಮೃಗ ತಿಂದು ತೇಗುತ್ತದೆ ಏನು ಮಾಡೋದು?.... ನರಸಿಂಹನೋ 'ಅವನಿಹಳ್ಳಿಗೆ ಹೋಗಿಬಂದಮೇಲೆ ಬೇಕಾದರೆ ಅದು ನನ್ನ ತಿನ್ನಲಿ ಖಂಡಿತ ಭಾಷೆ ಕೊಡ್ತಿನಿ ಪುಣ್ಯಕೋಟಿ ಎಂಬ ಗೋವು ಹಿಂದೆ ಕೊಟ್ಟಿರಲಿಲ್ಲವೆ? ಆ ಗೋವು ನಮ್ಮ ವಂಶೀಕರ ಮನೇಲೆ ಇದ್ದದ್ದು ಖಂಡಿತ ನಾನು ವಾಪಸ್ಸು ಬರ್ತೀನಿ' ಅಂತ ನನ್ನ ಹತ್ತಿರ ಹೊಡ್ಕೊಂಡ. 'ನಾನೇನು ಹುಲಿರಾಯನೆ?' ಎಂದಾಗ ಬಂದೂಕಕ್ಕೆ ಅಡ್ಡಬಿದ್ದು ಉಳಿಸು ಎಂದು ಅಂಗಲಾಚಿದ ...ಹೆದರದೆ ಧೈರ್ಯವಾಗಿರು ಅಂತ ಅಭಯ ನೀಡಿದೆ. ಒಂದು ಮೋಟು ಮರದಮೇಲೆ ಅವನನ್ನ ಹತ್ತಿಸಿದೆ. ನಾನು ಆ ಕತ್ತೆ ಚರ್ಮವನ್ನ ಹೊದ್ದು ಮರದಕೆಳಗೆ ಮಲಗಿದೆ ...ನರಮನುಷ್ಯನ ವಾಸನೆ

ಹಿಡಿದು ಚಂಗನೆ ನೆಗೆದು ಬಂತು ಆ ನರಭಕ್ಷಕ ಹುಲಿ. ಮರದಮೇಲಿದ್ದ ನರಸಿಂಹ ನನ್ನು ನೋಡಿತು. ಆರ್ಭಟಿಸಿ ಎಗರಲಾಡಿತು. ಕೈಗೆ ಸಿಕ್ಕಿದ ಆ ಬೇಟೆಗಾಗಿ ಬಡಿದಾಡಿತು"

"ನಿಮ್ಮನ್ನ ತಿನ್ನಬಹುದಿತ್ತಲ್ಲಾ?"

"ನನ್ನನ್ನ ಕತ್ತೆ ಅಂತ ತಿಳಿದು ಮೋಸಹೋಯ್ತು ಆ ಹುಲಿ. ನಾನು ಮಾತಾಡಿದ್ದರೆ ಇವತ್ತು ಆ ಕಥೆ ಹೇಳೋಕೆ ನಾನೆಲ್ಲಿರ್ತಿದ್ದೆ? ಕೇಳಿ ಮುಂದೆ. ಮೆಲ್ಲಗೆ ಹಾಗೇ ಮರಕ್ಕೆ ಒರಗಿ ಕುಳಿತು ಒಂದುಸಲ ಅದು ಮೇಲೆ ಎಗರಿ ನರಸಿಂಹನಿಗಾಗಿ ಬಾಯಿ ಬಿಟ್ಟಾಗ ಕತ್ತಿಗೆ ಗುರಿ ಇಟ್ಟು ಢಮಾರ್ ಎಂದು ಗುಂಡು ಉಡಾಯಿಸಿದೆ. ಒಂದೇ ಕ್ಷಣದಲ್ಲಿ ಆ ನರಭಕ್ಷಕ ಭಯಂಕರವಾಗಿ ಆರ್ಭಟಿಸಿ....ಅಯ್ಯೋ....ಎನ್ನುತಾ ಹುಲಿರಾಯನಲ್ಲಿಯೆ ತನ್ನ ಪ್ರಾಣವ ಬಿಟ್ಟಿತು ..." ಎಂದರು.

"ಆಮೇಲೆ...." ಎಂದು ಉಸಿರು ಹಿಡಿದು ಕೇಳುತ್ತಿದ್ದ ನಾನು ಬಿಸುಸುಯ್ದೆ.

"ಆಮೇಲೇನು—ಇದೆಯಲ್ಲ ಹಾರ ತುರಾಯಿ ಮೆರವಣಿಗೆ—ಉತ್ಸವ........" ಎಂದು ಅಲ್ಲಿಗೇ ಮಾತು ನಿಲ್ಲಿಸಿದರು. ಮಿಂಚೊಂದು ಸುಳಿಯಿತೇನು? ಅಲ್ಲ ಸಾವಂತ್ರಮ್ಮ ವಾಪಸ್ಸು ಬಂದರು. ಅವರ ಹಿಂದೆಯೇ ದಫೆದಾರ್ರು ಒಳಗೆ ಹೋದರು. —ನಾನು ಹೊರಗೆ ಹೋದೆ. ಹೋಗುತ್ತಿದ್ದಂತೇ ನರಭಕ್ಷಕ ಹುಲಿ ಕಥೆ ಮೆಲುಕು ಹಾಕಿದೆ.

— ದಾಶರಥಿ ದೀಕ್ಷಿತ್.



ಒಂದಾಣೆಗೆ ೬—ನಾಲ್ಕಾಣೆಗೆ ೨೫ ಅಂತ ತಪ್ಪುಲೆಕ್ಕ ಮಾಡ್ತಿದೀಯಲ್ಲೋ!

ಅದು ಸರೀಮ್ಮಾ! ಅದು ನಯಾಪೈಸಾ ಲೆಕ್ಕಾಮ್ಮ!

ಅಂಕಿ ಅಂಶ ಕಾರ್ಯಾಲಯ

ಆ ಬೋರ್ಡನ್ನು ನೋಡುತ್ತಲೂ ನಾನು ಒಳಗೆ ನುಗ್ಗಿದೆ. ಏಕೆಂದರೆ, ನನ್ನ ಕುತೂಹಲ ಕೆರಳಿತು. ಮ್ಯಾನೇಜರ ಎದುರು ಕುಳಿತು, ಅವರನ್ನು ಮಾತಾಡಿಸಿದೆ. ನಿಜಕ್ಕೂ, ಆ ಕಾರ್ಯಾಲಯ ಅತ್ಯುತ್ತಮ ರೀತಿಯಲ್ಲಿ ಜನಸೇವೆ ಮಾಡುತ್ತಿದೆ ಎಂದು ನನಗೆ ಮರುಕ್ಷಣದಲ್ಲೇ ತಿಳಿಯಬಂತು.

ಯಾವ ಒಂದು ವಾದವನ್ನು ಸಮರ್ಥಿಸಬೇಕಾದರೂ, ಈಗ ಅಂಕಿ ಅಂಶಗಳು ಅತ್ಯಗತ್ಯ ತಾನೆ? ಉದಾಹರಣೆಗೆ, ಹಾಲಿನಪುಡಿ. ಹಾಲಿನಪುಡಿಯ ಉಪಯೋಗದಿಂದ ಮಕ್ಕಳ ಆರೋಗ್ಯ ಹೆಚ್ಚಿದೆ, ಅಂತ ವಾದಿಸಬೇಕೇನು? ಅಂಕಿ ಅಂಶ ಕಾರ್ಯಾಲಯಕ್ಕೆ ಹೋಗಿ ಅವರು ಒದಗಿಸುತ್ತಾರೆ. "ಭಾರತ ದೇಶದಲ್ಲಿ ೧೯೬೮ರಿಂದ ೧೯೭೪ರವರೆಗೆ ೩೩೮೩೪ ಟನ್ ಹಾಲಿನಪುಡಿಯನ್ನು ಹಂಚಲಾಯಿತು. ಮಕ್ಕಳ ತೂಕ ಈ ಎಂಟು ವರ್ಷಗಳಿಂದ ಸರಾಸರಿ ೫.೪ ಔನ್ಸು ಹೆಚ್ಚಿದೆ; ಹೆಣ್ಣು ಕೂಸುಗಳ ತೂಕ ೫.೨ ಔನ್ಸ್ ಹೆಚ್ಚಿದೆ; ಗಂಡುಕೂಸುಗಳ ತೂಕ ೫.೬ ಔನ್ಸು ಹೆಚ್ಚಿದೆ", ಅಂತ ಅವರು ತಮ್ಮ ಮುದ್ರೆ ಒತ್ತಿದ ಕಾಗದದಲ್ಲಿ ಟೈಪ್‌ಮಾಡಿಕೊಡುತ್ತಾರೆ. ಅವರ ಕಷ್ಟಕ್ಕೆ ಪರಿಹಾರವಾಗಿ ನಾವೊಂದಿಷ್ಟು ಚಾರ್ಜು ಕೊಡಬೇಕು ಅನ್ನಿ. ಆದರೂ, ಅವರೊದಗಿಸಿದ ಅಂಕಿ ಅಂಶಗಳಿಂದ ನಾವು. ಜನರನ್ನು ಡಂಗು ಬಡಿಸಿ, ನಮ್ಮ ವಾದದಲ್ಲಿ ಗೆಲ್ಲಬಹುದಲ್ಲಾ ...ಆ ವಿಷಯವನ್ನು ಗಮನದಲ್ಲಿಡಿ.

ಇಲ್ಲ! ಹಾಲಿನಪುಡಿಯನ್ನು ಖಂಡಿಸಬೇಕೆ? ಹೋಗಿ, ಅದೇ ಕಾರ್ಯಾಲಯಕ್ಕೆ. ಅದಕ್ಕೂ, ಜನತೆಯನ್ನು ಮರುಳುಮಾಡಿಸಬಲ್ಲ ಅಂಕಿ ಅಂಶಗಳನ್ನು ಮ್ಯಾನೇಜರ್‌ರವರು ಒದಗಿಸುತ್ತಾರೆ, ಚಾರ್ಜು ಕೊಟ್ಟರೆ. "ಹಾಲಿನಪುಡಿಯನ್ನು ಹಂಚುತ್ತಿರುವ ಕೇಂದ್ರಗಳಲ್ಲಿನ ಆಸ್ಪತ್ರೆಗಳಲ್ಲಿ ವರ್ಷ ವರ್ಷ ಶೇಕಡ ೪.೦೯ರಂತೆ ಚಿಕಿತ್ಸೆಗೆ ಬರುವ ಮಕ್ಕಳ ಸಂಖ್ಯೆ ಹೆಚ್ಚುತ್ತಿದೆ. ಹಂಚಿಕೆಯಲ್ಲಿ ನಿರತರಾಗಿರುವ ನೌಕರರ ಪೈಕಿ, ೬೮೩೦೫ ಜನಕ್ಕೆ ಉಬ್ಬಸವೂ, ೮೪೨೧ ಜನರಿಗೆ ಇಸುಬೂ ತಲೆದೋರಿದೆ ಆದರ ರವಾನೆಯಲ್ಲೇ ನಿರತರಾಗಿರುವ ಸಿಬ್ಬಂದಿಯ ಪೈಕಿ, ಶೇಕಡ ೦೦೧ ಜನರು ಮರಣ ಹೊಂದಿದಾರೆ ಹಾಲಿನಪುಡಿ ಹಂಚಿಕೆ ಪ್ರಾರಂಭವಾಗುವ ಮೊದಲು ಆ ಸಂಸಾರಗಳಲ್ಲಿ ಶೇಕಡ .೦೩೩ ಮಕ್ಕಳಾಗುತ್ತಿದ್ದದ್ದು ಹೋಗಿ, ಈಗ, ಅಂದರೆ ಕಳೆದ ಸಾಲಿನಲ್ಲಿ ಮಕ್ಕಳ ಸಂಖ್ಯೆ .೦೩೨ಕ್ಕೆ ಇಳಿದಿದೆ" ....ಸಾಲದೆ? ಈ ಅಂಕಿ ಅಂಶಗಳನ್ನು ಕೇಳಿದಾಗ, ಎಂಥವರೂ ಮೋಸಹೋಗುವರೆಂಬುದರಲ್ಲಿ ಸಂದೇಹವಿಲ್ಲ.

ಜನಜೀವನದ ಮಟ್ಟ ಏರುತ್ತಿದೆ ಎನ್ನಬೇಕೆ? ಕಾರ್ಯಾಲಯಕ್ಕೆ ಹೋಗಿ. "ಶೀಗೆಪುಡಿ ವ್ಯಾಪಾರ ಶೇಕಡ ೭ರಷ್ಟು ಕಡಮೆಯಾಗಿದೆ; ಗುಂಡುಸೂಜಿಗಳ ಬಳಕೆ ಶೇಕಡ ೧೧ರಷ್ಟು ಹೆಚ್ಚಿದೆ; ಕಳೆದ ವರ್ಷದ ಮೊದಲನೆಯ ೧೦ ತಿಂಗಳಲ್ಲಿ ೩೩ ಲಕ್ಷ ೮೬ ಸಾವಿರ ೪೩೧ ಗಜ ರಿಬ್ಬನ್ ಖರ್ಚಾಗಿದೆ, ಇದರ ಪೈಕಿ ಶೇಕಡ ೭೧ರಷ್ಟು ಉದ್ದದ ರಿಬ್ಬನ್, ಗ್ರಾಮಾಂತರಗಳ ಸಂತೆಮಾಳಗಳಲ್ಲೇ ಮಾರಾಟವಾಗಿದೆ", ಎಂಬ ಉತ್ತಮ ಅಂಕಿ ಅಂಶಗಳನ್ನು ಅವರು, ಹೇಗೋ ಏನೋ, ಲೆಕ್ಕಾಚಾರವಾಗಿ. ಎದೆ ತಟ್ಟಿ ಪ್ರಚಾರಮಾಡಲು ಉಪಯುಕ್ತ ರೀತಿಯಲ್ಲಿ, ಅವರು ಕೊಡುತ್ತಾರೆ.

ಜನಜೀವನದ ಮಟ್ಟ ಪಾತಾಳಕ್ಕಿಳಿಯುತ್ತಿದೆ, ಎಂದು ಕೂಗಾಡಬೇಕೆ? ಆ ಕೂಗನ್ನು ಜನತೆ ಲಾಲಿಸಲು ಖಡಾಖಂಡಿತ ಅಂಕಿ ಅಂಶಗಳು ಬೇಕೆ? ಹೋಗಿ, ಅದೇ ಕಾರ್ಯಾಲಯಕ್ಕೆ...."ಭಾರತ ದೇಶದ ಗಣಿಗಳ ಆಳ ಶೇಕಡ ೪ರಷ್ಟು ಇಳಿದಿದೆ; ರೈಲುಡಬ್ಬಿಗಳಲ್ಲಿ ಪ್ರತಿ ಪ್ರಯಾಣಿಕನಿಗೂ ಸಿಗುವ ಗಾಳಿಯಲ್ಲಿ ಕಾರ್ಬಾನಿಕ್ ಆಸಿಡ್ ಗ್ಯಾಸಿನ ಪರಿಮಾಣ ಶೇಕಡ ೮ರಷ್ಟು ಹೆಚ್ಚಿದೆ; ಸವಕಲು ಮೂರುಕಾಸುಗಳ ಸಂಖ್ಯೆ ಶೇಕಡ ೬ರಷ್ಟು ಅಧಿಕವಾಗಿದೆ; ಬೆಂಗಳೂರಲ್ಲಿ ಸೊಳ್ಳೆಗಳ ಸಂಖ್ಯೆ, ವಾತಾವರಣದ ಪ್ರತಿ ಘನ ಅಂಗುಲಕ್ಕೂ ೧೬ರಿಂದ ೨೪ಕ್ಕೇರಿದೆ" ಎಂಬಿವೇ ಮುಂತಾಗಿ ನೂರಾರು ಲೆಕ್ಕಗಳು, ಜನತೆಯನ್ನು ಬೆರಗುಮಾಡುವಂಥವು, ಯಾರೂ ಇಲ್ಲವೆನ್ನಲಾರದಷ್ಟು ಅಧಿಕಾರವಾಣಿಯಿಂದ ನೀವು ಉದ್ಘೋಷಿಸುವಂಥವು, ಆ ಕಾರ್ಯಾಲಯದಿಂದ ನಿಮಗೆ ದೊರೆಯುತ್ತವೆ. ಅದರ ಫಲವನ್ನು ಈಗಾಗಲೇ ಅನೇಕ ರಾಜಕಾರಣಿಗಳೂ, ಪತ್ರಿಕಾಕರ್ತರೂ, ಪಡೆಯುತ್ತಿದ್ದಾರೆ. ನೀವೇಕೆ ತಡಮಾಡುತ್ತಿದ್ದೀರಿ?

— ರೇವಣ್ಣ.

ಮಂಜುನಾಥ ಉಡುಪ ವಿಲಾಯಿತಿಗೆ ಹಾರಿಹೋಗಿ ಬಂದನಂತರ ಉಡುಪಿ ಬ್ರಹ್ಮಭವನದ ಹೊಸಿಲಮೇಲೆ "ಇಲ್ಲಿಗೆ ಬರುವಾಗ ಹೊಟ್ಟೆಪಟ್ಟೆಯನ್ನು ಬಿಗಿಮಾಡಿ ಕೊಳ್ಳಿ" ಎಂದು ಬರೆಸಿದ್ದಾನೆ. (ಪತ್ರ)

—ನ್ಯಾಯುವೇ? ಅಲ್ಲವೇ!!

* * *

ಯುನೋ ಕಚೇರಿಯ ಬಾಗಿಲುಗಳನ್ನು ನಮ್ಮ ಊರಿನ ಬಡಗಿಗಳೇ ಮಾಡಿ ಕೊಟ್ಟರಂತೆ.

—ಕಾರಣ! ಯಾವ ಕಾಲದಲ್ಲೂ ಆ ಬಾಗಿಲುಗಳನ್ನು ಪೂರ್ಣ ಮುಚ್ಚಲು ಅಸಾಧ್ಯವಾಗಿರಲೆಂದೇ!! ನಮ್ಮೂರು ಶಾಂತಿಗ್ರಾಮ!!

* * *

‘ಹೆಂಗಪ್ಪ’ ಗೆದ್ದ!

‘ಹೆಂಗಪ್ಪ’ ಗೆದ್ದವ್ನೆ, ಷೋಕೀಲಿ ನಿಂತವ್ನೆ
ಶೃಂಗಾರದಿಂದವ್ನೆ !
ಮಲ್ಲಿಗೆ ಹಾರಾ ನಿಂಬೆಹಣ್ ನೀಡಿರೋ
ತುತ್ತೂರಿ ಊದ್ತವ್ನೆ !
ಟೋಪೀನ ಇಕ್ಕವ್ನೆ ಒರಟ್ಬಟ್ಟೆ ಉಟ್ಟವ್ನೆ
ಹಲ್ಲಲ್ಲು ಕಿರಿತಾವ್ನೆ
ಇಕ್ಕೆಲದಲ್ಲೂವೆ ಬಳಗಾನ ಸೇರ್ಸವ್ನೆ
ಬೆಂಗ್ಳೂರ್ಗೆ ಹೊರಟವ್ನೆ

*   *   *

ಸೊಟ್ಟ ಬೆನ್ನಿನಮೇಲೆ ಸಾಲಾವ ಹೊತ್ತವ್ನೆ
ಮನೆ ಮಠ ಮಾರವ್ನೆ !
ಓಬಿರಾಯನ್ ಕಾಲದ್ಕಾರಲ್ಲಿ ಕುಂತವ್ನೆ
ಕೈ ಕೈ ಮುಗಿತಾನೆ
ಮೊಳದುದ್ದ ಮೂಗ್‌ಮ್ಯಾಲೆ ಬೆರಳನ್ನ ಇಕ್ಕವ್ನೆ
ಮಾರುದ್ದ ಆಡ್ತಾನೆ
ತೋಳಲಿ ಬಳಲುವ ತನ್ನಳಿಯ ತಮ್ಮಂದಿರ
ಮೇಲಕ್ಕೆ ಎತ್ತಾನೆ

*   *   *

ಎರಡೂ ಕಣ್ ಮುಚ್ಕತ್ತ ಕನಸನ್ನೆ ಕಾಣ್ತಾನೆ
ಭುಜವನ್ನೆ ತಟ್ತಾನೆ
ಎದುರಾಳಿ ಗುಂಪನ್ನ ಬಗೀತವ್ನೆ ಸಿಗೀತವ್ನೆ
ಶಾಪಾನ ಹಾಕ್ತಾನೆ
ಅಡ್ಡಾದಿಡ್ಡಿ ಮಾತ ದಡ್ಡನಂಗಾಡ್ತಾನೆ
ಕನಸ್ನಲ್ಲೇ ನೆಗೀತಾನೆ
ಕಂಡೋರ ಮೇಲೆಲ್ಲ ಕಾಣದ್ದ ಹೇಳ್ತಾನೆ
ಕುಂತಲ್ಲೆ ಕುಣೀತಾನೆ

*   *   *

ಬಿಲ್‌ಬಿಲ್ನೆ ಮುರಿದವ್ನೆ, ಚೂರ್ ಚೂರು ಮಾಡವ್ನೆ,
ಜನಕನ ಕರೆಸವ್ನೆ
ಆಕಾಶದ್ದಾರೀಲಿ ಹಾರುತ್ತ ಹೋಗವ್ನೆ
ಆ ಡಿಲ್ಲೀಲಿ ತಿರುಗವ್ನೆ
ತಾಳಕ್ಕೆ ತಕ್ಕಂತೆ ಧಕಧೈಯ್ಯ ಕುಣಿದವ್ನೆ
ಆ ಮೇಳಕ್ಕೆ ಸೇರವ್ನೆ
ಕನಸಲ್ಲೆ ಮೈಮರೆತು ಕೈಕಟ್ಟೆ ಕುಂತವ್ನೆ
ತೂಕಡಿಸುತ್ತವ್ನೆ

* * *

ಸುತ್ತಲು ಸುಳಿಯುವ ಕುಲದವರನ್ನೆಲ್ಲ
ಕಡೆಗಣ್ಣಿನೋಡ್ತಾನೆ
ಹತ್ತಿದ ಏಣಿಯ ಒತ್ತೊತ್ತಿ ಕೆಡವ್ತಾನೆ
ಎಡಗೈಯ ನೀಡ್ತಾನೆ
ತಾಯ್ನುಡಿ ಬಾಯ್ನುಡಿ ಬಿಸಿ ಬಿಸಿ ಒಸಿ ಒಸಿ
ಅಂಗ್ರೇಜಿ ಬೆರಸ್ತಾನೆ
ಇದ್ವೊಂಸರ್ ಮುಂದೇನೆ ಯದ್ವಾತದ್ವಾ
ಒದರಾಕೆ ಹೊರಟಾನೆ

* * *

ಮುದ್ದು 'ಹೆಂಗಪ್ಪ'ಗೆ ಬಿದ್‌ಬಿದ್ದು ತಲೆಬಾಗೊ
ಕನಸೊಡೆದು ಎದ್ದವ್ನೆ !
ಮುದ್ದೆ ಮುದ್ದೆಯಾಗಿ ಓಟನ್ನೆ ಗಳಿಸವ್ನೆ
ಎದ್ದೆದ್ದು ಮಲಗವ್ನೆ
ಒದ್ದೆಬಟ್ಟೆ ಬಿಗಿದು ಹೊಟ್ಟೆಗೆ ಕಟ್ಟವ್ನೆ
ಅಟ್ಟಕ್ಕೆ ಏರವ್ನೆ !
ಅದ್ತಾನೊ ನೀರಲ್ಲಿ? ಅದ್ತಾನೋ ಹಾಲಲ್ಲಿ?
ಎಲ್ಲರ್ನ ಮುಳುಗಿಸ್ತಾನೆ.

— ಕಾಮತ್

ಏಪ್ರಿಲ್ ಒಂದರಂದು

ಬರ್ತೀಯೇನೇ ಕಮ್ಲಾ, ಉಗಾದಿಹಬ್ಬ, ದೇವಸ್ಥಾನಕ್ಕೆ ಹೋಗಿಬರೋಣ.... ಬರೀಕೈಲೇ ಹೋಗೋಣೇ ಅಮ್ಮಾ, ಅಂತೀಯಾ?....ಬಾ, ಅಲ್ಲೇ ಗುಡಿ ಬಾಗಿಲಲ್ಲೇ ಅಂಗ್ಡಿ ಇದೆ, ಹಣ್ಣುಕಾಯಿ ತೊಗೊಂಡು ಕೊಟ್ರಾಯ್ತು, ಇಲ್ಲಿಂದ ಯಾಕೆ ಹೊತ್ಕೊಂಡು ಹೋಗಬೇಕು?.. ಖಾಲಿ ಬುಟ್ಟಿ ಒಂದು ಕೈಲಿ ಹಿಡಿಕೊಂಡು ಬಾ... ಬಂದ್ಯಾ?....ನಡೀ ಹೋಗೋಣ.

ಎಲ್ಲಪ್ಪ,....ಎರಡು ತೆಂಗಿನಕಾಯಿ, ನಾಲಕ್ಕು ಬಾಳೆಹಣ್ಣು, ಒಂದು ಪೊಟ್ಣ ಕರ್ಪೂರ, ನಾಲಕ್ಕು ಊದುಕಡ್ಡಿ, ಕೊಡು ...ಇಕೋ, ಈ ಬುಟ್ಟೀಲೇ ಇಟ್ಟುಬಿಡಪ್ಪ ಎಲ್ಲ .. ಹಾಗೇ ! .... ಎಷ್ಟಾಯ್ತಪ್ಪ?....ಹಾ ! .... ಒಂದ್ರೂಪಾಯಿ ಅಂದ್ಯಾ!.... ಏನಂದೆ? ಎರಡು ತೆಂಗಿನಕಾಯ್ಗೆ ಅರವತ್ನಾಲ್ಕು ನಯಾಪೈಸಾ, ಕರ್ಪೂರ ಒಂದಾರು ನಯಾಪೈಸಾ, ಊದುಕಡ್ಡಿ ಒಂದಾರು ಪೈಸಾ, ಬಾಳೆಹಣ್ಣು ಇಪ್ಪತ್ನಾಲ್ಕು ನಯಾ ಪೈಸಾ, ಒಟ್ಟು ನೂರು ನಯಾಪೈಸಾ ಅಂದ್ರೆ ಒಂದ್ರೂಪಾಯಿ, ಅಂದ್ಯಾ! ಅಂದ್ರೆ, ... ನಮ್ಮ ಹಳೇ ದುಡ್ಡಿನ ಲೆಖ್ಖದಲ್ಲಿ ...ನಾಕೂವರಾಣೆಗೊಂದು ತೆಂಗಿನಕಾಯಿ, ಎಂಟ್ಕಾಸಿಗೊಂದು ಬಾಳೆಹಣ್ಣು ಬಿತ್ತು, ನೀವೇ ನೋಡ್ಕೊಳ್ರಪ್ಪ ಅಂತೀಯಾ?.... (ಏನೇ ಕಮ್ಲೂ, ಅರ್ಥವಾಯ್ತೇನೇ ಏನಾದ್ರೂ?........ತಲೆಗೇ ಹತ್ಲಿಲ್ಲ ಅನ್ನು, ಅಂತೀಯಾ? ತೋರಿಸ್ಕೊಳ್ಳೋದು ಹೇಗೇ ನಮ್ಮ ಹೆಡ್ಡತನಾನ!....ಕೊಟ್ಬಿಡು ಕೂಗದೇ ಒಂದು ರೂಪಾಯ್ನ !)....ಹಿಡಿಯಪ್ಪ....ತೊಗೋ ರೂಪಾಯಿ !

* * *

ನಮಸ್ಕಾರ ರಾಯ್ರೇ ಅಂದ್ಯೇನಯ್ಯಾ?... ....ನಿನಗೂ ನಮಸ್ಕಾರ, ಹಾಗೂ ಹೊಸವರ್ಷದ ಶುಭಾಶಯಗಳು....ಏನು ಬೇಕಾಗಿತ್ತು ರಾಯರಿಗೆ ಅಂತ ಕೇಳ್ತಿಯಾ? ....ಇನ್ಯಾತಕ್ಕೆ ಬರ್ತೀನಿ ಹೇಳು ನಿನ್ನ ಷಾಪಿಗೆ, ಖಾಯಂ ಗಿರಾಕಿ ನಾನು!... ಕೊಡು ಒಂದು ಬಾಟಲ್ 'ಭೀಷಣ್ ಸಾಲ್ಟು'; ಅದಿಲ್ಲದೇ ಇದ್ರೆ ನಡೆಯೋದೇ ಇಲ್ಲ ನೋಡು....ತೊಗೊಳ್ಳೋದು ಬಿಟ್ಟೆ ಅಂದ್ರೆ ವಾಯುನೋವು ಹೆಚ್ಚಾಗಿಬಿಡುತ್ತೆ, ಕೀಲು ಕೀಲೂ ಹಿಡಿದ್ಕೊಂಡು ಬಿಡತ್ತೆ ...ಇವತ್ತಂತೂ ಹೊರೆಭಾರ ನೈಯಿ ಹೋಳಿಗೆ ಊಟ ಉಂಡು! .. ಊಂ, ಕೊಟ್ಯಾ?.. .ತೊಗೋಪ್ಪ ಈ ಹತ್ತುರೂಪಾಯಿ ನೋಟು, ಚಿಲ್ರೆ ಕೊಟ್ಬಿಡು....ಇದೇನು ನೀನು ಎಷ್ಟು ಕೊಟ್ಟಿರೋದು ವಾಪಸ್ಸು? ನೋಡ್ಕೊಳ್ಳಿ

ರಾಯ್ರೇ, ನಾಲಕ್ಕು ರೂಪಾಯಿ, ಮುವ್ವತ್ತೊಂದು ನಯಾಪೈಸಾ ಇದೆ ಅಂತಿಯಾ? ....(ಅಂದ್ರೆಷ್ಟು?........ನಾಲಕ್ಕು ರೂಪಾಯಿ?....ಅದೆಲ್ಲೋ ಒಂದು ಟೇಬಲ್‌ನ ಕತ್ತರಿಸಿಟ್ಟಿದ್ದ ನೀನು, ಬ್ರಿಟಾನಿಯಾ ಬಿಸ್ಕತ್ ಕಂಪೆನಿಯೋರು ಪೇಪರ್‌ನಲ್ಲಿ ಪ್ರಕಟಿಸಿದ್ದು ಅಂತ....ಅದನ್ನಾದರೂ ಜೇಬಿನಲ್ಲಿಟ್ಕೊಂಡಿದ್ರೆ ಚೆನ್ನಾಗಿತ್ತು!).... ಏನೋ ಅನುಮಾನಿಸ್ತಿದೀರಲ್ಲ ರಾಯ್ರೇ, ಹಾಗಂದ್ರೆ ನಾಲಕ್ಕುರೂಪಾಯಿ ಐದಾಣೆ ಅಂದ್ಯಾ? ಅಷ್ಟೇಗಯ್ಯಾ, ಬಾಟಲ್ ಬೆಲೆ ಐದು ರೂಪಾಯಿ ಏಳು ಆಣೆ ಅಲ್ವೇ?.... ಇವತ್ತು ಹೇಗೆ ನಾಲ್ಕಾಣೆ ಜಾಸ್ತಿ ತೊಗೊಂಡೆ?....ಏನಂದೆ?....1879ನೇ ಇಸ್ವಿ ಏಪ್ರಿಲ್ ನಿಂದ ರೇಟ್ಸ್ ಜಾಸ್ತಿ ಆಗಿದೆ ಅಂದ್ಯಾ?... ಸಾವಿರದ....ಎಂಟ್ನೂರ ...ಇದೇನಯ್ಯ ನೀನು ಮಾತಾಡ್ತಿರೋದು?....ಆ?... ಅದೇ ರಾಯ್ರೇ, ಸರ್ಕಾರದೋರು ಶಕಾ ಪದ್ಧತೀನ, ಹೊಸ ತರಹದ್ದು, ಜಾರಿಗೆ ತಂದಿಲ್ವೇ ಅದರ ಪ್ರಕಾರ, ಅಂದ್ಯಾ?........ ಹುಂ .. ಹಿ . ಓ ...ತಿಳೀತು....ಬರ್ಲೇ... ನಮಸ್ಕಾರ ಕಣಯ್ಯಾ!

* * *

ಇವತ್ತೆಂಥಾ ಕೆಲ್ಸಮಾಡ್ದೆ?........ಹರಿಕತೇಗೆ ಬಂದೋಳು ಮಂಗ್ಳಾರತೀಗೆ ಹಾಕಕ್ಕೆ ಚಿಲ್ರೇನೇ ತರಬೇಡ್ವೇ?....ಹೋಗ್ಲಿ, ನೀನು ಕೊಟ್ಟ ರೂಪಾಯಿ ಸೊಂಟ ದಲ್ಲಿದೆಯಲ್ಲ, ಅದನ್ನೇ ಮುರಿಸ್ಕೊಳ್ಳೋದು ದಾಸರ ಕೈಗೇ ಕೊಟ್ಟು;....ಆಹಾ! ಏನ್ಸೊಗಸಾಗಿ ಹೇಳಿಬಿಟ್ರು ಇವತ್ತು ಸೀತಾಮ್ಮನೋರ್ನ ರಾವಣ ಹಾರಿಸ್ಕೊಂಡು ಹೋದ ಕತೇನ ದಾಸರು!.. ಪರಮಾತ್ಮಾ, ಮಹಾನುಭಾವಾ, ಶ್ರೀರಾಮಾ!.... ತೊಗೊಳ್ಳಿ ಅಜ್ಜಿ ಮಂಗಳಾರ್‍ತೀ ಅಂದ್ಯಾಪ್ಪ ಮಗೂ?....ಇರು, ಬಂದೆ;....ಹಿಡಿ, ಇದಕ್ಕೆ ಚಿಲ್ರೆ ಕೊಟ್ಬಿಡು ಹಾಗೇನೇ....ಆ?....ಇದ್ಯೇನು....ಹತ್ತೇ ಆಣೆ ಕೊಟ್ಟಿದ್ದೀ? ....ಅಷ್ಟೇನೇ ಅಜ್ಜಿ, ಇನ್ಮೇಲೆ ಒಂದ್ರೂಪಾಯಿನ ಚಿಲ್ರೆ ಅಂದ್ಯಾ? .. ಆ?....ಅಯ್ಯೋ ಮುಂದಕ್ಕೆ ಹೋಗೇಬಿಟ್ಟ!....!!

* * *

ಏನ್ಕೇಳಿದೆ ಅಮ್ಮ ನೀನು?....ಲೆಖ್ಖ ಹಾಕಿ ನೋಡೋ ನೀನು, ನಾಲ್ಕೂವರಾಣೆ ಹಾಗೆ ಎರಡು ತೆಂಗಿನಕಾಯಿ, ಎಂಟ್ಕಾಸಿನ ಹಾಗೆ ನಾಲಕ್ಕು ಬಾಳೆಹಣ್ಣು, ಊದು ಕಡ್ಡಿ, ಕರ್ಪೂರ, ಇಪ್ಪಕ್ಕೆ ನೂರು ನಯಾಪೈಸಾ—ಅಂದ್ರೆ ಒಂದ್ರೂಪಾಯಿ ಆಯ್ತೇ ಅಂತ ಕೇಳಿದೆಯಾ? .. ಎಲ್ಲಿಂದ ಆದೀತು?... ಟೇಬಲ್ ನೋಡಿ ಹೇಳ್ತೀನಿ ತಡಿ.... ನಾಲ್ಕೂವರಾಣೆ ಅಂದ್ರೆ....ಇಪ್ಪತ್ತೆಂಟು ನಯಾಪೈಸಾ,... ....ಎಂಟ್ಕಾಸು ಅಂದ್ರೆ, ಒಂಬತ್ಕಾಸಿಗೆ ತೊಗೋಬೇಕು ಲೆಖ್ಖಾನ ಐದೈದು ನಯಾಪೈಸಾ....ಮೂರು ಮೂರು ನಯಾಪೈಸಾ ಊದುಕಡ್ಡಿ ಕರ್ಪೂರ, ಒಟ್ಟು....ಎಂಭತ್ತೆರಡು ನಯಾಪೈಸಾ ಆಯ್ತು ....ಅಂದ್ರೆ....ಹದಿಮೂರಾಣೆ! ...ಬಿಡ್ದೆ ಅಮ್ಮ ಮೂರಾಣೆಗೆ ಟೋಪಿ!....ಹಹಹಹ!

* * *

ಆ? .. ಏನಜ್ಜಿ?....ನಿನ್ನ ಸಮಸ್ಯೆ ಏನೋ ಇರೋ ಹಾಗಿದೆ? .. ....ಒಂದು ರೂಪಾಯ್ಗೆ ಹತ್ತೇ ಆಣೆ ಚಿಲ್ರೆ ಕೊಟ್ಟ ಅಂದ್ಯಾ!....ಹಹಹಹ!....ಅದು ಹಳೇ ಆಣೆ

ಅಲ್ಲಜ್ಜೀ? ಹೊಸದು!........ಆಣೆ ಹಾಗೆ ಅಂಚು ವಂಕಿವಂಕಿಯಾಗಿದೆಯಲ್ಲ ಅಂತ ಕೇಳ್ತೀಯಾ?....ಹೌದು, ಹತ್ತು ನಯಾಪೈಸಾದ್ದು ನಾಣ್ಯ ನಮ್ಮ ಹಳೇ ಒಂದಾಣೆ ಇದ್ಹಾಗೇ ಇರುತ್ತೆ!....ಅಯ್ಯೋ, ಇನ್ನೂ ನನ್ಕಾಲದಲ್ಲಿ ಈ ಕಣ್ನಲ್ಲಿ ಏನೇನು ವಿಚಿತ್ರ ನೋಡ್ತೀನೋ ಅಂತೀಯಾ ಅಜ್ಜೀ!....ಹಹಹಹ!....

*   *   *

ಯಾಕಣ್ಣ? .... ಸಪ್ಪಗಿದೀಯಾ? .... ಆ?....ಹಬ್ಬದೂಟ ಮಾಡಿ ಹೊರಕ್ಕೆ ಹೊರಟರೆ .. ಯಾಕೋ ಈ ಹೊಸಾ ನಾಣ್ಯ....ಹೊಸಾ ಇಸ್ವಿ ಪದ್ಧತಿ .. ಎಲ್ಲ ತಲೆ ತಿರುಗಿಸ್ತಾ ಇದೆ ಅಂದ್ಯಾ!....ಹೌದು, ...ಪಾಶ್ಚಿಮಾತ್ಯರಲ್ಲಿ, ಏಪ್ರಿಲ್ ೧-ದನೇ ತಾರೀಖ್ನ ಏನೂಂತ ಕರೀತಾರೆ ಗೊತ್ತೇ ನಿಮಗೆಲ್ಲ?... All Fools' Day ಅಂದ್ರೆ "ಸರ್ವ ಮಂಕರ ದಿನ" ಅಂತ! ಅದಕ್ಕೇ ನಮ್ಮ ಸರ್ಕಾರದೋರು, ಈ ಸಲ ಹೊಸವರ್ಷದ ಮೊದಲ್ನೇ ದಿನ....ಉಗಾದಿ ದಿವ್ಸಾನೇ ದೇಶದ ಜನಾನೆಲ್ಲ Fools ಅಥವಾ ಮಂಕ್ರನ್ನ ಮಾಡೋಣಾ ಅಂತ ಹೀಗೆ ಮಾಡಿರಬೇಕು ಅಲ್ವೇ?.... ಹಹಹಹ!....

— ಸುನಂದಮ್ಮ.

— o —



ಇಂತಹ ಮೈಮರೆತ ಮನವಿರುವ ಮೂದನನ್ನೂ ಓಟು ಗಿಟ್ಟಿಸೇ ನಾನು ಜಯಗಳಿಸಿದ್ದು!

ಹುಣಿಸೆ ಮರ

ಊರಾಚೆ ಬಾವಿ ಬಳಿ ಹುಣಿಸೆಮರದಡಿಯಲ್ಲಿ
ಊರಬಾಲಕರದೇ ದೊಂಬಿ ಪೂರ !
ಅವರ ಮುಖದಲಿ ನಲಿವು ಅವರ ಕಣ್ಣಲಿ ಗೆಲುವು
ಅವರ ಕೈಯೊಳಗೆಲ್ಲ ಕೋಲು, ಕಲ್ಲು !

ಮರದಮೇಲೂ ಬಾಲವಿಲ್ಲದಾ ಕಪಿವೃಂದ
ನೆಗೆದು ನೇತಾಡುತ್ತ ಕಾಯಕಿತ್ತು
ಕೆಳಗಿಂದ ರೊಯ್ಯೆಂದು ಜೊತೆಯವರು ಬೀರಿದಾ
ಕಲ್ಲು ತಾಕಲು, ಪಾಪ, ಗೋಳು ಹೊಯ್ದು

ಹುಣಿಸೆಕಾಯಿಂದಲೇ ತಮ್ಮ ಸೇಡನು ತೀರ್ಸಿ
ನೆಲದಮೇಲಿನ ಮಂದಿಗಾಯ್ತು ಪೆಟ್ಟು !
ದಾರಿಯಲಿ ಹೋಗುವಾ ರೈತಮಹಿಳಾಮಣಿಗ
ಳವರನ್ನು ಬೈಯ್ಯುವರು, ಅಚ್ಚಕೊಚ್ಚೆ

ಮನೆಗಳಿಗೆ ಹಿಂತಿರುಗಿ ಮಾತೆಯಾ ಕಾಡುವರು
ಹಸಿವು ! ರೊಟ್ಟೆಯ ನೀಡು ! ಎಂದು ಬೇಡಿ,
ಮುದ್ದಾದ ಹೈಕಳಿಗೆ ಮುಖ ತೊಳೆದು ತಟ್ಟೆಯಲಿ
ಅಶನವೀಯಲು, ಅಯ್ಯೊ!, ಕ್ಷಣದಿ ಮಾಯ !


— ರಾಮೇಶ್ವರಿ.

ಹೀಗೆ ಮಾತಾಡಿ

ಸರಸ ಸಂಭಾಷಣೆಯಲ್ಲಿ ಪ್ರವೀಣ ಅಂತ ಎನಿಸಬೇಕಾದರೆ, ನೀವು ಯಾವಾಗಲೂ ಎಲ್ಲರ ಹತ್ತಿರವೂ, "ಬರಬರುತ್ತಾ ಕಾಲ ತೀರ ಕೆಟ್ಟುಹೋಗಿಬಿಟ್ಟದೆ" ಅಂತ, ಮಾತು ಪ್ರಾರಂಭಿಸಿ, ಸಾಕು ಬಸ್‌ನಲ್ಲಿ ಕುಳಿತಾಗ, ಹಿಂದೆ ಇದ್ದ ಕಂಡಕ್ಟರುಗಳು ಒಬ್ಬರಿಗೂ ಸೀಟಿಲ್ಲ ಅಂತ ಹೇಳುತ್ತಲೇ ಇರಲಿಲ್ಲ, ಶಿರಸಾವಹಿಸಿ ಕರೆದುಕೊಂಡು ಹೋಗುತ್ತಿತ್ತು, ಬಸ್ಸು, ಲಗ್ಗೇಜನ್ನು ತೂಕಮಾಡಿಸುತ್ತಿರಲಿಲ್ಲ, ಆಕ್ಟ್ರಾಯಿ ಗೇಟ್ ಹತ್ತಿರ ನಿಲ್ಲಿಸುತ್ತಲೇ ಇರಲಿಲ್ಲ, ಡ್ರೈವರ್‌ನ ಬಲಗಡೆಯೇ ದೊಡ್ಡಮನುಷ್ಯರನ್ನೆಲ್ಲ ಕೂರಿಸುತ್ತಿದ್ದರು, ಅಂತ ಗೊಣಗಿ. ಆಗ, ಇಡೀ ಬಸ್ಸೇ ನಿಮ್ಮ ಪರ ಮಾತು ಸೇರಿಸಿ, ನಿಮಗೆ ಬೇಕಾದ ನಶ್ಯ, ಬೀಡಿ, ಎಲಡಿಕೆ, ಚಿಲ್ಲರೆ ಪೇಪರು, ಎಲ್ಲವನ್ನೂ ಸಹಪ್ರಯಾಣಿಕರು ಒದಗಿಸಿ, ನೀವು ಆರಾಮವಾಗಿ ಹೋಗಬಹುದು. ರೆಯಿಲಲ್ಲೂ ಅಷ್ಟೆ! "ಬರಬರುತ್ತಾ ರೆಯಿಲುಗಳು ಹೊರಡುವುದೇ ತಡ, ಸೇರುವುದೇ ಅನುಮಾನ, ಬೀಸಣಿಗೆಗಳನ್ನೇನೋ ಇರಿಸಿದಾರೆ, ಆದರೆ, ಈ ಹಾಳು ಗಾಳಿ ಕುಡಿದುಕೊಂಡು ಎಷ್ಟುಹೊತ್ತು ಈ ಡಬ್ಬಿಯಲ್ಲಿ ಕೂರುವುದು, ಅಂತ ಪ್ರಾರಂಭಿಸಿ! ಎಲ್ಲರೂ, ನಿಮ್ಮ ಪಕ್ಷ ವಹಿಸುವರು!.... ಊರಲ್ಲಿ, ಹೋಟೆಲ್ ಬೆಂಚಿನಮೇಲೆ ಕೂತು, ದೋಸೆ ಬೇಯುವವರೆಗೂ ಕಾದು ಕಾಲಕಳೆಯುವಾಗ, ಹೋಟೆಲ್ ದೋಸೆಯ ದಪ್ಪ, ಸುತ್ತಳತೆ, ರುಚಿ, ಇವು ಹಿಂದಿನ ಕಾಲದಲ್ಲಿ ಹೇಗಿತ್ತು, ಬರಬರುತ್ತ, ದೋಸೆ ತೀರ ತೆಳುವಾಗಿಬಿಟ್ಟದೆ, ಅನ್ನಿ!........ ಪ್ರೊಪ್ರೈಟರೂ ಕೂಡ, ನಿಮ್ಮ ಜೊತೆ ದನಿಕೂಡಿಸುವರು. ಸ್ಕೂಲು ಹುಡುಗರನ್ನು ಕಂಡಾಗ, ಹಿಂದೆ ಹುಡುಗರು ಎಷ್ಟುಚೆನ್ನಾಗಿ ಓದುತ್ತಿದ್ದರು, ಕಂಡವರ ಮನೆ ಚರಂಡಿ ಬಳಿಯದೆ, ಓಟ್‌ಫಾರ್ ಓಟ್‌ಫಾರ್ ಅಂತ ಕೂಗಾಡದೆ, ತಲೆಬಗ್ಗಿಸಿಕೊಂಡು ಬರೆಯುತ್ತಿದ್ದರು, ಎಂದು ಹೇಳಿ........ಆ ಅಭಿಪ್ರಾಯವನ್ನು ಊರಿನ ಶಾನುಭೋಗ ಪಟೇಲ, ಅರ್ಚಕ, ಜೋಯಿಸ, ವೈದ್ಯ ಕ್ಷೌರಕರಾದಿಯಾಗಿ ಸಮಸ್ತರೂ ಸಮರ್ಥಿಸಿ, ನಿಮ್ಮನ್ನ ಸಮರ್ಥ ಎನ್ನುವರು. ಕ್ಷೌರದಂಗಡಿಯ ಸಂಭಾಷಣಾ ಲಹರಿಯಲ್ಲೂ ಇದೇ ಮಾತನ್ನ ಸೇರಿಸಿ. ನಾಡುಕತ್ತಿಯಷ್ಟುಹರಿತವಾವುದು, ತಣ್ಣೀರನ್ನೇ ಸೋಪಿಲ್ಲದೆ ಬಳಿದರೆ ಗಡ್ಡ ಮೀಸೆಗಳು ಎಷ್ಟು ಹದಕ್ಕೆ ಬರುತ್ತವೆ, ಪವುಡರಿಂದಲೇ ಮೊಡವೆಗಳ ಉದ್ಭವ, ತೈಲದಿಂದಲೇ ಬಟ್ಟತಲೆಯ ಜನನ, ಸೋಪಿಂದಲೇ ತೊನ್ನಿನ ಮೊಳಕೆ, ಅಂತ. ಅಲ್ಲಿ ನಿಮ್ಮ ಕ್ಷೌರದ ಮುಕ್ತಾಯಕ್ಕಾಗಿ ಕಾದು ಕುಳಿತಿರುವ ಹಿರಿಯರೆಲ್ಲರೂ, "ಹೌದು, ಹೌದು" ಎಂದು ಸುವರ್ಣಯುಗಕ್ಕಾಗಿ ನಾಲಗೆ ಚಪ್ಪರಿಸುವರು. ಹಿಂದಿನ

ಕಾಲದಲ್ಲಿ ಖಾಯಿಲೆಗಳೇ ಇರಲಿಲ್ಲ, ಲಂಚವೆಂಬುದು ಕೇವಲ ಕೆಲವೇ ಜನರ ದುರಭ್ಯಾಸವಾಗಿತ್ತು, ಅಂಥವರೂ ಕೂಡ ಕಾಸು ಕೊಟ್ಟರೆ ಆ ಕಾಸಿಗೆ ತಕ್ಕ ಕಜ್ಜ ಮಾಡಿಕೊಡುತ್ತಿದ್ದರು ದೇವರ ಸಾಕ್ಷಿಯಾಗಿ, ಮಹಿಳೆಯರೆಲ್ಲ ಮಂಡೋದರಿಗಳು, ಮಹನೀಯರೆಲ್ಲ ಮಹಾಗುಣ ಸಂಪನ್ನರು, ಎಂದು ನಿಮ್ಮ ಭುಜವನ್ನು ತಟ್ಟುವರು. ಬೇಸಾಯಗಾರರನ್ನು ಕಂಡರೆ, ಆಗಲೂ, ಬರುಬರುತ್ತಾ ಕಾಲ ತೀರ ಕೆಟ್ಟುಹೋಯಿತು ಅಂತಲೇ ಹೇಳಿ. ಕಾಳು ಚೆಲ್ಲಿ ದೇವರಿಗೆ ಕೈಮುಗಿದು ಕೂತರೆ, ಕಣಜ ತುಂಬುತ್ತಿತ್ತು ಅಲ್ಲವೆ, ಗೌಡರೆ, ಅಂತ ಪ್ರಾರಂಭಿಸಿ! "ಹೌದು ಸ್ವಾಮಿ! ನಿಮ್ಮ ಬಾಯಿ ನಿಜವನ್ನೇ ನುಡೀತದೆ" ಅಂತಾರೆ, ರೈತರು. ಗುಡಿಯೊಳಗಿನ ಪೂಜಾರಿಯ ಹತ್ತಿರವೂ, ಅದನ್ನೇ ಹೇಳಿ. ಆಗ, ಅವರು, "ಆಹ! ನಮ್ಮ ತಾತ ದಿನವೂ ಒಂದು ಕಾಯಿಹೋಳು ತರುವರು ಮನೆಗೆ; ಸೊಂಟದಲ್ಲಿ ಏನಿಲ್ಲ ಅಂದರೂ, ಎರಡಾಣೆ ಪುಡಿಕಾಸು ಬಿಗಿದಿರುವರು ಮನೆಗೆ ಬರುವಾಗ ...ಆಗಿನ ಶ್ರದ್ಧೆ, ಆಗಿನ ಭಕ್ತಿ. ನಿಜಕ್ಕೂ, ಆಗ, ಈ ಕಲ್ಲಿನೊಳಗೆ ದೇವರು ವಾಸವಾಗಿದ್ದ, ಗುರು" ಅಂತ ನಿಮ್ಮ ಮಾತನ್ನು ಮೆಚ್ಚುವರು. ನಿಜಕ್ಕೂ, ಮನುಷ್ಯನಿಗೆ ಸೋಲೇ ಗೆಲುವು. ಕಣ್ಣೀರಿಡುವುದೇ ಆನಂದ. ಅವನ ಕಣ್ಣುಗಳು ಸದಾ ದೃಷ್ಟಿಹರಿಸುವುದು, ಮುಂದಕ್ಕಲ್ಲ; ಹಿಂದಕ್ಕೆ. ಯಾವುದೋ ಒಂದು ನಿಧಿಯನ್ನು ಕಳೆದು, ನಾವು ಅದನ್ನು ನೆನೆನೆನೆದು ಮರುಗುತ್ತ ಆಯುಷ್ಯವೆಲ್ಲ ವ್ಯಯಮಾಡುತ್ತಿದೇವೆ. ಇಂದಿನ ಈ ಹೋರಾಟಕ್ಕಿಂತ, ಹಿಂದಿನ ಆ ಚೀರಾಟವೇ ನಮಗೆ ಆಪ್ಯಾಯಮಾನ.

— ವೈ. ಎಂ. ಪುಟ್ಟಸ್ವಾಮಿ.



ಚುನಾವಣೇಲಿ ಠೇವಣಿ ಕಳಕೊಂಡರೂ ನಯಾಪೈಸಾದಲ್ಲಿ ಹೊಸ ಶಕೆಯಲ್ಲಿ ಲಕ್ಷಾಧೀಶ್ವರರಾದರು ಅವರು.

ಡಾ|| ಹಿ. ಕ್ರೈ. ದಾಸರ ದಿನಜೀವನ

ಇಂದು ಏಪ್ರಿಲ್ ೧. ಚೈತ್ರ ಶುದ್ಧ ಪಾಡ್ಯಮಿ. ಷಹರಿನ ಜನಸಂದಣಿಯಿರುವ ಒಂದು ಮೂಲೆಯಲ್ಲಿ ಆತನ ದವಾಖಾನೆ. ಎದುರಿಗೆ ಆಂಜನೇಯನ ಗುಡಿ. ವೀರ ಆಂಜನೇಯನನ್ನೂ ಸಾಧುವಂತೆ ಕಾಣಿಸುವ ವೀರಾಗ್ರಣಿ ಪೂಜಾರಿಯು ಅಲ್ಲಿನ ಪಾರುಪತ್ಯ ವಹಿಸಿಕೊಂಡಿದ್ದಾನೆ. ದವಾಖಾನೆಯ ಎರಡು ಪಕ್ಕಗಳಲ್ಲಿಯೂ ಎರಡು ಹೋಟೆಲುಗಳು. ಒಂದು ದಾಕ್ಷಿಣಾತ್ಯದ ಉಡುಪಿಯ ಭವನ. ಇನ್ನೊಂದು ಉತ್ತರಾತ್ಯದ ದೆಹಲಿ ಭವನ. ಅವುಗಳ ಎರಡು ಅಕ್ಕಗಳಲ್ಲಿಯೂ ಎರಡು ನವೀನ ಮಾದರಿಯ, ಆಧುನಿಕ ಕ್ಷೌರದ ಅಂಗಡಿಗಳು. ಯಥಾಪ್ರಕಾರ ಒಂದು ಉತ್ತರಾತ್ಯದ ಮಾತಾ ಹೇರ್ ಕಟಿಂಗ್ ಸೆಲೂನ್ ಇನ್ನೊಂದು ದಾಕ್ಷಿಣಾತ್ಯದ ಆಯುಷ್ಕರ್ಮಶಾಲೆ.

ಸೂಕ್ಷ್ಮವಾಗಿ ವಿಚಾರ ಮಾಡಿದರೆ, ಡಾಕ್ಟರನ ದವಾಖಾನೆ, ಎದುರಿನ ದೇವಸ್ಥಾನ, ಪಕ್ಕದ ಹೋಟೆಲುಗಳು, ಪಕ್ಕ ಪಕ್ಕದ ಕ್ಷೌರಿಕರ ಅಂಗಡಿಗಳು ಎಲ್ಲವೂ ತಿರುಪತಿ ಸೇವೆಯನ್ನು ಬಂದವರಿಗೆ ನುಣ್ಣಗೆ ಮಾಡುವ ಮಂದಿರಗಳೇ! ಆದರೂ ಎರಡೇ ಅಂಗಡಿಗಳು ಇದನ್ನು ಧೈರ್ಯವಾಗಿ, ವಾಸ್ತವವಾಗಿ, ಬಾಯಿ ಬೋರ್ಡು ಬಿಚ್ಚಿ ಹೇಳಿಕೊಳ್ಳುತ್ತಿವೆ ಅಷ್ಟೇ!

ಇಂತಹ ಅನುಕೂಲವಾತಾವರಣದ, ಕೇಂದ್ರದಲ್ಲಿನ ದವಾಖಾನೆಗೆ ಡಾ|| ದಾಸ್ ರವರು, ಬೆಳಗ್ಗೆ ಎಂಟು ಗಂಟೆಗೆ ಸಾಲಂಕೃತರಾಗಿ ಬಿಜಯಗೈಯ್ಯುತ್ತಾರೆ. ಅಂಗಿಯನ್ನು ತೆಗೆದಿಟ್ಟು, ಲಂಗದಂತಹ ಮೇಲುಡುಪನ್ನು ತೊಟ್ಟು, ಸ್ಟೆತಸ್ಕೋಪ್ ಮಂಗಳ ಮಾಲೆಯನ್ನು ಧರಿಸಿ, ಜೇಡನ ಬಲೆಯಲ್ಲಿ ಜೇಡನು ಕೂರುವ ರೀತಿಯಲ್ಲಿ, ದೇಶಾವರದ ನಗೆಯನ್ನು ಮುಖಕ್ಕೆ ಅಂಟಿಸಿಕೊಂಡು, ತಿರುಗುವ ಕುರ್ಚಿಯಲ್ಲಿ, ಕೂರುತ್ತಾರೆ.

ಬನ್ನಿ! ಈಗ, ನನ್ನ ಚಿರಪರಿಚಿತನಾದ ಡಾ|| ಹೆಚ್. ಸಿ. ದಾಸನ ಜತೆಯಲ್ಲಿ ಒಂದು ದಿನವನ್ನು ಕಳೆಯುವ. ಹೆಚ್. ಸಿ. ಎಂದರೆ ಈ ಡಾಕ್ಟರ ಜಾತಿಯವರಿಗೆ ಮೂಲಕೂಟಸ್ಥನಾದ ಹಿಪ್ಪೊಕ್ರೆಟೀಸ್‌ನ Initials. ಹದಿನಾರಾಣೆ ಡಾಕ್ಟರಾದ ಶ್ರೀ|| ಹೆಚ್. ಸಿ. ದಾಸರವರು ನಿದರ್ಶನಕ್ಕೆ ಮಾದರಿಯಾದಂತಹವರು!! ಅಲ್ಲವೇ! ಅಂತಹ ಹೆಸರನ್ನಿಟ್ಟುಕೊಳ್ಳಬೇಕಾದರೆ, ಕೋಲೇಬಸವನ ಛಾಯೆ ಬುನಾದಿಯಿಂದಲೂ ಅವರಿಗೆ ಇಂದಿರಲಿಕ್ಕೇ ಬೇಕು. ಹೌದಾ? ಅಲ್ಲವೇ?

ಸುಮಾರು ೮-೩೦ಕ್ಕೆ ಮೊದಲ ರೋಗಿಗಳಾಗಿ ನರ-ಸಿಂಹಯ್ಯನವರು ಬರುತ್ತಾರೆ. ಈತ ಹೆಸರಾಂತ ನಟ. ರಾಕ್ಷಸರ ಪಾರ್ಟಿಗೆ ಮಾಡಿಟ್ಟ ಮುಖ. ತಲೆ ತುಂಬಾ ಗುಂಗುರು ಗುಂಗುರಾಗಿ ಕೂದಲು ಚೆಲ್ಲಾಪಿಲ್ಲಿ ಹರಡಿಬಿದ್ದಿದೆ. ತಂಬಾಕಿನ ಹೊಗೆಯಿಂದ ಗಂಟಲು ಗೊರಾಗಿದೆ. ಆ ಗಾರ್ ಕೊರಲಿನಿಂದಲೇ ಬಂದವನು ಘರ್ಜಿಸುತ್ತಾನೆ. "ಏನ್ರೀ ಡಾಕ್ಟರೇ! ನಿನ್ನೆ ಸಂಜೆ ಎರಡು ರೂಪಾಯಿ ಕಸಿದುಕೊಂಡು, ಔಷಧಿ ಕೊಟ್ಟು ನಾಟಕದ ಹೊತ್ತಿಗೆ ಗಂಟಲು ಸರಿಹೋಗುತ್ತೆ ಅಂದ್ರಿ; ಹಿರಣ್ಯಾಕ್ಷನಾಗಿ ಭರ್ಜರಿ ಕಂದ ಹಾಡಲು ಹೊರಟರೆ, ಕಂದನ ಕಂಠದಂತೇ ಪೀಪಿಸುಸ್ತಾಯಿತಲ್ರೀ! ಇನ್ನೊಂದು ರಾತ್ರಿ ಹೀಗಾದರೆ ನನ್ನ ಹೆಸರೇ ಕೆಟ್ಟುಹೋಗುತ್ತಲ್ರೀ! ಯಾರಾದರೂ ಶಹಣೆ ಗಂಟಲು ಡಾಕ್ಟರಿದ್ದರೆ ಹೇಳ್ರೀ! ಅಲ್ಲಾದರೂ ಹೋಗ್ತೀನಿ" ಎಂದು ಕರಕರ ನುಡಿಯುತ್ತಾನೆ, ಎದುರು ರಸ್ತೆಯ ಆಂಜನೇಯನ ಗುಡಿಯವರಿಗೂ ಕೇಳಿಸುವಂದನಿಯಲ್ಲಿ.

ಹೀಗೆ ಹೀನಾಮಾನ ಅನ್ನಿಸಿಕೊಂಡರೂ ಡಾ|| ದಾಸ್‌ರವರ ನಗೆಮುಖ ಕಲ್ಲಿನಲ್ಲಿ ಕಡೆದಂತೆ ಸ್ಥಿರವಾಗಿದೆ. ಶಾಂತಿಯಿಂದ ಹೇಳುತ್ತಾನೆ "ಇದೇನ್ರೀ ಹೀಗಂತೀರಿ ನರ-ಸಿಂಹಯ್ಯನವರೇ! ಹಾಸ್ಟೆಲಿನ ವಿದ್ಯಾರ್ಥಿಗಳು ಈಗತಾನೇ ಔಷಧಿಗೆ ಬಂದು ಹೋದರು. ನಿನ್ನೆ ನೀವು ಬಲು ಭೇಷಾಗಿ ಕಂದ ಹಾಡಿದಿರಿ ಎಂದು ಬಲು ಹೊಗಳಿದರಲ್ರೀ!" ಎಂದು ಗಾಳ ಹಾಕುತ್ತಾನೆ.

ನರ-ಸಿಂಹಯ್ಯನವರ ಮೀಸೆ ನಿಮಿರಿ ನಿಂತು, ಮುಖದ ಇಕ್ಕೆಲಗಳಲ್ಲಿನ ಅಯಾಲು, ಅಥವಾ ಕೇಸರವನ್ನು ಚುಚ್ಚಿ ನಿಲ್ಲುತ್ತವೆ. ಬಾಯಿ ಬಿರಿಯುತ್ತೆ. ಇದನ್ನು ಕಂಡ ಡಾಕ್ಟರು, ಬುಟ್ಟಿಗೆ ಬಿದ್ದವರನ್ನು ಭದ್ರಪಡಿಸಲೋಸುಗ "ಮಹಿಳಾ ಕಾಲೇಜಿನ ವಿದ್ಯಾರ್ಥಿಗಳು ಬಂದಿದ್ದೋರು" ಎಂದನ್ನುತ್ತಾನೆ.

ನರ-ಸಿಂಹಯ್ಯನವರ ಎದೆ ಕುಣಿದಾಡುವುದು, ಮೈನವಿರೇಳುವುದು. ಆ ಹೊತ್ತಿಗೆ ಡಾಕ್ಟರು ಔಷಧದ ಚೀಟಿಯನ್ನು ಬರೆದಿದ್ದಾರೆ. ಚೀಟಿಯ ತಳಭಾಗದಲ್ಲಿ ಮೂರು ಸಾಲು ಸಂಕೇತದ ಅಂಕಿಗಳಿರುತ್ತವೆ. ಮೊದಲನೆಯದು ಹನ್ನೆರಡಾಣೆ, ಔಷಧದ ಮೌಲ್ಯ. ಎರಡನೆಯದು ೧-೮-೦, ರೋಗಿಯ ಅವಮಾನಕಾರಕ ಮಾತುಗಳಿಗೆ ಜುಲ್ಮಾನೆ. ಮೂರನೆಯ ಸಾಲು ಮೂರು ರೂಪಾಯಿ, ಡಾಕ್ಟರ ಹೊಗಳಿಕೆಯ ಬೆಣ್ಣೆಸುಳ್ಳಿಗೆ ಕಾಣಿಕೆ.

ಹುಂಜದಂತೆ ಹೆಮ್ಮೆಪಡುವ ನರ-ಸಿಂಹಯ್ಯನವರಿಂದ, ಅವರಂದಿದ್ದುದಕ್ಕೆಲ್ಲಾ ಕೋಲೇಬಸವನಂತೆ ತಲೆಯಾಡಿಸುತ್ತಾ, ಡಾಕ್ಟರು, ಉಪಾಯವಾಗಿ ೫-೪-೦ಗೆ ಬಗಿದುಬಿಟ್ಟಿದ್ದಾರೆ. ಸಿಂಹವನ್ನು ಸುಸ್ತುಮಾಡಿ ಕಂಭಕ್ಕೊರಗಿಸಿ ಸುಲಿದುದನ್ನು ನೆನೆದು, ಡಾಕ್ಟರ ಸ್ಥಿರನಗೆ ಮುಖದಮೇಲೆ ಮಂದಸ್ಮಿತವೂ ಹಾದುಹೋಗಿದೆ, ಒಂದರ ಕ್ಷಣ.

* * *

೯-೫ ಆಗಿದೆ.

ನಾಲ್ವರು ಧಡೂತಿ ಆದ್ಮಿಗಳು ನಂತರ ಬರುತ್ತಾರೆ. "ಏನಪ್ಪಾ! ಯಾರಿಗೆ ನಿಮ್ಮಲ್ಲಿ ಏನು" ಎಂದು ಡಾಕ್ಟರು ಸಂಶಯದಿಂದಲೇ ಕೇಳುತ್ತಾರೆ. ನೋಡಿದರೆ ನಾಲ್ವರೂ ಭುಜಕ್ಕೆ ಭುಜ ಕೊಟ್ಟರೆ ಗಜೇಂದ್ರನನ್ನೇ ಮೋಕ್ಷದತನಕ ಸಾಗಿಸಬಹುದು ಅನ್ನುವ ದೇಹಸ್ಥಿತಿಯ ಕಳೆ ಅವರ ಮುಖಗಳಲ್ಲಿದೆ

ಅವರ ಮುಖಂಡ ಉತ್ತರಿಸುತ್ತಾನೆ "ಡಾಕ್ಟರೇ ನಮ್ಮ ಮಠದ ಮಹಾಸ್ವಾಮಿಗಳವರು ಬರುತ್ತಿದ್ದಾರೆ. ಅವರಿಗೆ ಮೈಬೇನೆ ಹತ್ತಿಗೆ. ನೀರು ಔಷಧಿ ಕುಡಿಯಲ್ಲ. ಮಡಿಯಲ್ಲಿ ನೀವೇ ಖುದ್ದು ಚೂರ್ಣ ಕೊಡಬೇಕು" ಎಂದು.

ಡಾಕ್ಟರು ಮಡಿಯಾದ ರೇಷ್ಮೆಷರ್ಟನ್ನು ತೋರಿಸುತ್ತಾರೆ. ಮಡಿಯಾದ ರೇಷ್ಮೆ ಷರಾಯಿನ ಇಸ್ತ್ರಿಗೆರೆಯನ್ನು ತೋರಿಸುತ್ತಾರೆ ಈಗತಾನೆ "ಮಡಿ"ಯಾಗಿ ಬಂದಿದೆ ಎಂದನ್ನುತ್ತಾರೆ.

ಮಹಾಸ್ವಾಮಿಗಳು ಬಿಜಯಗೈಯ್ಯುತ್ತಾರೆ. ಹುಲಿಯ ಚರ್ಮವನ್ನು ಹೊದ್ದಿದ್ದಾರೆ ಹುಲಿಯನ್ನೇ ಹೊಡೆಯಬಹುದಾದ ಮೈಕಟ್ಟು ಅವರಿಗಿದೆ. ಆದರೂ ಮುಖದಮೇಲೆ "ಬೋಲಬೋಲ"ದ ಕಾಂತಿಹೀನತೆಯಿದೆ. ಬಲ ಹಸ್ತವನ್ನೇ ಎಡಗೈಯಿಂದ ಎತ್ತಿಹಿಡಿದಿದ್ದಾರೆ. ಬಲಗೈಗೆ ಏನೂ ತಾಕದಂತೆ ಸುತ್ತಲೂ ಇರುವ ಪಹರೆಯವರು, ಅವರನ್ನು ದವಾಖಾನೆಯ ಗರ್ಭಗುಡಿಗೆ ಕರೆದು ತರುತ್ತಾರೆ. ನಂತರ ಪಹರೆಯವರು ಡಾಕ್ಟರ ಆಣತಿಯ ಮೇರೆಗೆ ಹೊರಬೀಳುತ್ತಾರೆ. ಮಹಾ ಮಠಾಧಿಪರಿಗೆ ಬಲಗೈ ಉಂಗುರ ಬೆರಳಲ್ಲಿ ಉಗುರುಸುತ್ತು ಅಘೋರವಾಗಿ ಎದ್ದಿದೆ ಉಂಗುರ ಬೆರಳಿನ ಅಡಿಯಲ್ಲಿರುವ ಅಮೋಘ ವಜ್ರದ ಉಂಗುರವು ಬಿಗಿಯುತ್ತಿದೆ. ಮಹಾಸ್ವಾಮಿಗಳ ಬೇನೆಗೆ ಉಗುರುಸುತ್ತುಗಿಂತ ಉಂಗುರವೇ ಕಾರಣ ಎಂಬುವುದು ಡಾಕ್ಟರಿಗೆ ಕಾಣಿಸಿದೆ. ಡಾಕ್ಟರು ನಿವೇದಿಸಿಕೊಳ್ಳುತ್ತಾರೆ. "ಮಹಾಸ್ವಾಮಿಗಳೇ ಮೊದಲು ಈ ಉಂಗುರವನ್ನು ಕತ್ತರಿಸಿ ತೆಗೆದು, ನಂತರ ಈ ಉಗುರುಸುತ್ತಿನ ಕೀವನ್ನು ಶಸ್ತ್ರಚಿಕಿತ್ಸೆಯಿಂದ, ನಿಮಗೆ ನೋವಿಲ್ಲದಂತೆ ತೆಗೆಯುತ್ತೇನೆ. ಈ ಮಧ್ಯಾಹ್ನ ನಿಮಗೆ ಸುಖನಿದ್ರೆ ಬರುತ್ತದೆ. ಸ್ವಾಮಿಗಳ ಹಣೆಯಮೇಲಿನ ವಿಭೂತಿ ರಸ್ತೆಗಳನ್ನು ನೋಡಿ, ಡಾಕ್ಟರು "ಪರಮೇಶ್ವರನು ಚಿಕಿತ್ಸೆಗೆ ಸಹಾಯಮಾಡಲಿ, ನೆರವಾಗಲಿ", ಎಂದು ಸೇರಿಸುತ್ತಾರೆ.

ಮಹಾ ಮಠಾಧಿಪತಿಗಳು ತಲೆಯಾಡಿಸುತ್ತಾರೆ. ಡಾಕ್ಟರು ಬಲು ನಾಜೂಕಾಗಿ ಉಂಗುರವನ್ನು ಕತ್ತರಿಸಿ ತಟ್ಟೆಗೆ ಹಾಕುತ್ತಾರೆ ನಂತರ ಮಾದಕದ್ರವವನ್ನು ಬೆರಳಿಗೆ ಜಡಿದು, ಉಗುರುಸುತ್ತನ್ನು ಹರಿದು, ಆ ಕೀವು ಆ ತಟ್ಟೆಗೆ ಬೀಳುವಂತೆ ನಯವಾಗಿ ಚಿಕಿತ್ಸೆ ನಡೆಸುತ್ತಾರೆ. ಆ ಬೆರಳಿಗೆ ರುಮಾಲು ಸುತ್ತಿ "ನಿಮ್ಮ ಸೇವೆಯೇ ಈಶಸೇವೆ" ಎನ್ನುವ ಮುಖಭಂಗಿ ಧರಿಸುತ್ತಾರೆ. ಸ್ಥಿರನಗುವಿನ ನಗೆಯ ಮುಖಭಂಗಿಯ ಜತೆಗೆ.

ಮಹಾಸ್ವಾಮಿಗಳಿಗೆ ಹೊಸ ಯೌವನ ಬಂದಂತಾಗಿದೆ. ಕಣ್ಣು ಬಿಟ್ಟು ನೋಡಿ, "ಭಕ್ತಾ! ನಿನ್ನ ಸೇವೆಯಿಂದ ಪರಮೇಶ್ವರನು ಪುಳುಕಿತನಾಗಿರುವನು. ನಿನಗೆ ಮಂಗಳವಾಗಲಿ" ಎಂದು ಆಶೀರ್ವದಿಸಿ, "ಯಾರಲ್ಲಿ" ಎಂದು ಸ್ವಾಭಾವಿಕವಾಗಿ ಕೂಗುತ್ತಾರೆ. ನಾಲ್ವರು ಶಿಷ್ಯರೂ ಪ್ರತ್ಯಕ್ಷವಾಗುತ್ತಾರೆ. "ಡಾಕ್ಟರು ಬಲು ಶಹಣೆ ಇದ್ದಾರೆ. ಚಿಕಿತ್ಸೆ ನಡೆದಿದೆ. ಬೇನೆ ಪರಿಹಾರವಾಗಿದೆ. ಮಠಕ್ಕೆ ಹಿಂದಿರುಗೋಣ. ಡಾಕ್ಟರಿಗೆ ನಮ್ಮ ಆಶೀರ್ವಾದ ರೂಪಿನ ಸನ್ಮಾನವನ್ನು ಕೊಟ್ಟು ಬನ್ನಿ" ಎಂದು ಶ್ರೀಮುಖವನ್ನು ಪಠಿಸುತ್ತಾರೆ ನಂತರ ಹೊರಬೀಳುತ್ತಾರೆ.

ಹಿಂದೆ ನಿಂತ ಹಿರಿಯ ಶಿಷ್ಯ ತನ್ನ ಕಿಸೆಗೆ ಕೈಹಾಕುತ್ತಾನೆ. ಸುಮಾರು, ಕಡೇ ಪಕ್ಷ ಐವತ್ತು ರೂಪಾಯಿಯಾದರೂ ಗಿಟ್ಟಬಹುದು ಎಂಬ ಆಶೆ ಡಾಕ್ಟರ ನಗೆಮುಖದ ಮೇಲೆ ಕಾಣಿಸುತ್ತದೆ. ಹಿರಿಯ ಶಿಷ್ಯ ತನ್ನ ಕಿಸೆಯಿಂದ ಹುಷಾರಾಗಿ ಒಂದು ಚಿಟಿಕಿ ವಿಭೂತಿ, ಒಂದು ಒಣಗಿದ ಬಿಲ್ವಪತ್ರೆದಳವನ್ನು ತೆಗೆದು ಅಮೋಘ ಕರುಣೆಯಿಂದ ಡಾಕ್ಟರ ತೆರೆದ ಅಂಗೈಜೋಡಿಗೆ, ತಾಕಿದರೆ ಎಲ್ಲಿ ಸೋಂಕುತ್ತೋ ಎನ್ನುವ ಭೀತಿ ಯಿಂದ, ಎತ್ತರದಿಂದ ಹಾಕುತ್ತಾನೆ. ಹಾಕಿ ಓಡಿಯೇ ಬಿಡುತ್ತಾನೆ. ಆದರೂ— ಡಾಕ್ಟರು ಸಂತಸದಿಂದ ತಲೆಯಾಡಿಸುತ್ತಲೇ ಇದ್ದಾರೆ; ಕೋಲೆಬಸವನ ಮಾದರಿ ಯಲ್ಲಿ.

ಮಹಾಸ್ವಾಮಿಗಳ ಕೀವಿನ ತಟ್ಟೆಯನ್ನು ಡಾಕ್ಟರೇ ಮಡಿಯಲ್ಲಿ ತೊಳೆಯು ತ್ತಾರೆ. ವಜ್ರದ ಉಂಗುರದ ಎರಡು ತುಣುಕುಗಳನ್ನೂ ಖುದ್ದಾಗಿ ಶುಭ್ರಗೊಳಿಸಿ ತಮ್ಮ ಜೇಬಿಗೆ ಸೇರಿಸುತ್ತಾರೆ.

ನೂರಾಐವತ್ತು ರೂಪಾಯಿಗಳನ್ನು, ಮಾರ್ವಾಡಿ ಗಿರವಿ ಅಂಗಡಿಯಲ್ಲಿ ತರುವ ಇಂತಹ ಉಂಗುರ ಡಾಕ್ಟರಿಗೆ ವಿರಳ. ಆದರೆ ಮಹಾ ಮಠಾಧಿಪತಿಗಳಿಗೆ ಅತ್ಯಲ್ಪ. ಮಡಿ ಚಿಕಿತ್ಸೆಗೆ ಇಷ್ಟೂ ಬೇಡವೇ? ಮಾರ್ಗ ಯಾವುದಾದರೇನು? ಗುರಿ ಮುಖ್ಯ ವಲ್ಲವೇ?

* * *

ಸುಮಾರು ಹನ್ನೆರಡಾಗಿದೆ ಈಗ. ಡಾಕ್ಟರು ದವಾಖಾನೆಯನ್ನು ಬಂದು ಮಾಡಿ ಮನೆಗೆ ಹೊರಡುತ್ತಾರೆ. ಬನ್ನಿ ಅವರೊಡನೆ ಮನೆಗೆ ಹೋಗೋಣ. ಷಹರಿ ನಲ್ಲಿ ಹುಲಿ ಸಿಂಹಗಳನ್ನು ಬುಟ್ಟಿಗೆ ಉಪಾಯವಾಗಿ ಹಾಕುವ ಈ ಬೇಟೆಗಾರ ಮನೆಯಲ್ಲಿ ಯಾವ ರೀತಿ ದರ್ಬಾರ್ ಜೀವನ ನಡೆಸುತ್ತಾನೋ! ನೋಡೋಣ.

ದವಾಖಾನೆಯಿಂದ ಹೊರಟ ಡಾಕ್ಟರು, ಮಾಮೂಲಾದ ನಿತ್ಯಯಾತ್ರೆಯನ್ನು ಕೆಲವು ಸಾಹುಕಾರರ ಮನೆಗಳಿಗೆ, ನಡೆಸುತ್ತಾರೆ. ತಮ್ಮನೆ ಸೇರುವ ಹೊತ್ತಿಗೆ ಸುಮಾರು ಒಂದೂವರೆ ಗಂಟೆಯಾಗಿರುತ್ತದೆ. ಮನೆಯ ಹೊಸಿಲ ದಾಟದಾಗಲೇ,

ಆ ದೇಶಾವರದ ನಗೆಮುಖ, ಸಹಜವಾದ ಡಾಕ್ಟರ ಮುಖವಾಗುತ್ತದೆ. ಅಂಗಿ ಬಿಚ್ಚಿಡುವಾಗಲೇ, ಜೇಬಿನಲ್ಲಿದ್ದ ಆ ದಿನದ ಸಂಪಾದನೆಯನ್ನು ಅಲ್ಲೇ ಹಾಜರಿರುವ ಹೆಂಡತಿಯ ಬಲ ಅಂಗೈಲಿಟ್ಟು ತನ್ನ ಮುಂಗೈಯಿಂದ ಅದನ್ನು ಮುಚ್ಚಿ, ಇನ್ನು ಸ್ವಲ್ಪ ಹೊತ್ತಾದರೂ ಅವರಿವರ ಮರ್ಜಿಗೆ ತಕ್ಕಂತೆ ನಡೆಯಬೇಕಿಲ್ಲ, ನನಗೆ ಮನಸ್ಸು ಬಂದಂತೆ ಶಾಂತಿಯಿಂದಿರಬಹುದು ಎಂದನ್ನುಕೊಳ್ಳುತ್ತಾನೆ.

ಆದರೆ ಆ ವೇಳೆಗೆ ಆಕೆ ತನ್ನ ಬಿಡುವಿದ್ದ ಎಡಗೈಯನ್ನು ದೇವರಿಗೂ ಕಾಣದ ಮಾಯೆಯಿಂದ ಇವನ ಜೇಬಿಗೆ ಹಾಕಿ, ಮುರಿದ ವಜ್ರದ ಉಂಗುರದ ಚೂರುಗಳೆರಡನ್ನೂ ಜಾರಿಸಿ ತನ್ನ ಉಡಿಗೆ ಸೇರಿಸಿಕೊಳ್ಳುತ್ತಾಳೆ. ಇದರ ಮರ್ಮ ತಿಳಿಯಬೇಕು ಎಂದೆನ್ನುವ ಕುತೂಹಲ ಅವಳ ಮುಖದಲ್ಲಿ ಕಾಣಿಸುತ್ತದೆ. ಹೆಂಗಸರಿಗೆ ಕುತೂಹಲ ಏರಿದರೆ ಮುಖ ಬಲು ಚೆಂದ ಅಲ್ಲವೇ? ಕಾರಣ ಡಾಕ್ಟರಿಗೂ ಖುಷಿಯಾಗಿದೆ. ಈ ರೀತಿ ಹಿಪ್ಪೊಕ್ರೆಟೀಸ್ ದಾಸ ಇತ್ತ, ಹಿಪ್ಪೊಕ್ರೆಸಿ ಮಡದಿ ಅತ್ತ ಇಬ್ಬರೂ ಊಟಕ್ಕೆ ಹೊರಡುತ್ತಾರೆ.

ಊಟಮಾಡುವಾಗ ಆಕೆ ಅನ್ನುತ್ತಾಳೆ. "ನೋಡೀ ಅಂದ್ರೆ! ನೀವು ಈ ಸಾರಿ ತಂದ ಡೈಮಂಡ್‌ಸಕ್ರೆ ಬಲು ಚೆನ್ನಾಗಿತ್ತು. ಅದನ್ನು ಬೆರೆಸಿದ ಅಡಿಕೆ ಎಲೆ ನಿನ್ನೆ ಸಂಜೆ ಅಂಬುಜಮ್ಮನಿಗೆ ಕೊಟ್ಟಾಗ ಆಕೆ ಅವಾಕ್ಕಾದಳು" ಎಂದು. ಅಂಬುಜಮ್ಮ ದೊಡ್ಡ ಡಾಕ್ಟರ ಹೆಂಡತಿ. ಆ ಕಾರಣ ಡಾ|| ದಾಸ್‌ರವರಿಗೂ ಒಂದು ಬಗೆಯ ಸಂತಸ. "ಉತ್ತರಾತ್ಯರ ಅಂಗಡಿಯಲ್ಲಿ ಸಾಮಾನೆಲ್ಲಾ ಬಲು ಚೆನ್ನ ಕಣೆ" ಎಂದು ಅರಿಯದೆ ಅನ್ನುತ್ತಾನೆ ಡಾಕ್ಟರು.

"ಅಲ್ಲಿನವರ ಹೆಂಗಸರೂ ಕೂಡ ಬಲು ಚೆನ್ನಂತೆ" ಎನ್ನುತ್ತಾಳೆ ಆಕೆ. ಆಗ ಡಾಕ್ಟರ ಮನಸ್ಸಿಗೆ ಏನೋ ಸಂಶಯ ಮೂಡುತ್ತದೆ. "ನನಗೆ ಗೊತ್ತಿಲ್ಲ ಅಷ್ಟಾಗಿ ಅವರನ್ನು ಕಂಡಿಲ್ಲ" ಎಂದು ಮುಗುಮ್ಮಾಗಿ ಅನ್ನುತ್ತಾನೆ.

ಊಟ ಮುಗಿಯುತ್ತದೆ. ಡಾಕ್ಟರು ತನ್ನ ಕೊಠಡಿಗೆ ಬಂದು ಜೇಬನ್ನು ಹುಡುಕುತ್ತಾನೆ. ವಜ್ರದ ಉಂಗುರದ ಚೂರೆರಡೂ ನಾಪತ್ತೆ. ಆ ವೇಳೆಗೆ ಕೊಠಡಿ ಯಾಚೆ ಬಳೆ ಶಬ್ದ ಕೇಳಿಸುತ್ತದೆ. ಕುರ್ಚಿಯಲ್ಲಿ ಕೂರುತ್ತಾನೆ. ಎಲಡಿಕೆ ಮಡಿಸಿ ಕೊಂಡು ಆಕೆ ಬರುತ್ತಾಳೆ. ಡಾಕ್ಟರು ಅಡಿಕೆ ಹಾಕಿಕೊಂಡು ಅಗಿಯುತ್ತಿರುವಾಗ ಎಲೆಗೆ ಸುಣ್ಣ ಹಚ್ಚುತ್ತಾ ಆಕೆ ಅನ್ನುತ್ತಾಳೆ. "ಉತ್ತರಾತ್ಯರು ನಿರಾಶ್ರಿತರೆಂದರೂ ವಜ್ರದ ಒಡವೆಗಳನ್ನೇ ತೊಟ್ಟಿರುತ್ತಾರಂತೇಂದ್ರೆ" ಅನ್ನುತ್ತಾಳೆ. ಡಾಕ್ಟರು ಅಡಿಕೆಯನ್ನು ಅಗಿಯುತ್ತಲೇ ಇರುತ್ತಾನೆ. "ಆಶ್ರಯ ಕೊಡುವವರು ಸಿಕ್ಕರೆ ಇಕ್ಕಳ ಹಾಕೇ ಬಿಡುತ್ತಾರಂತೆ ಹೌದೇ ಅಂದ್ರೆ" ಅಂತ ಮುಂದುವರಿಸುತ್ತಾಳೆ ಡಾಕ್ಟರು ಅಡಿಕೆಯನ್ನೇ ಮೆಲಕು ಹಾಕುತ್ತಾನೆ. "ಅಂಬುಜಮ್ಮ ಅಂದ್ರು, ಹಣವಂತರಾದರೆ

ಅವರು ಬೊಕ್ಕಸವನ್ನೇ ಕೊಟ್ಟು ಬೇಕಾದವರನ್ನು ಬುಟ್ಟಿಗೆ ಹಾಕಿಕೊಳ್ಳುತ್ತಾರಂತೆ, ಅಲ್ಲವೇಂದ್ರೆ?" ಅಂತ ಸುಣ್ಣ ಹೆಚ್ಚಾಗಿ ಸವರಿದ ಎಲೆಯನ್ನೇ ಮಡಿಸಿಕೊಡುತ್ತಾಳೆ.

ಸುಣ್ಣಾಧಿಕ್ಯದ ಎಲೆ ಡಾಕ್ಟರಿಗೆ ಜ್ಞಾನೋದಯವನ್ನುಂಟುಮಾಡುತ್ತದೆ. ಉತ್ತರಾತ್ಯರು, ನಿರಾಶ್ರಿತರು, ಅಂದ, ವಜ್ರ, ಉಂಗುರ ನಾಪತ್ತೆ! ಎಲ್ಲವೂ ಡಾಕ್ಟರಿಗೆ ಸಾಲಾಗಿ ಸಕಾರಣವಾಗಿ ಕಾಣುತ್ತದೆ.

ಆಗ ಡಾಕ್ಟರು ತಾವೇ ಹೋಗಿ ಡೈಮಂಡ್ ಸಕ್ರೆ ಡಬ್ಬವನ್ನು ಅಡಿಗೆಮನೆಯಿಂದ ತಂದು, ನಾಲ್ಕು ಹರಳನ್ನು ಬಾಯಿಗೆ ಹಾಕಿಕೊಂಡು, ನಂತರ ಸಾವಧಾನವಾಗಿ ಮಧ್ಯಾಹ್ನ ಮಹಾ ಮಠಾಧಿಪತಿಗಳ ವಿಷಯವನ್ನು ಹೇಳುತ್ತಾನೆ

ಆಕೆ ಅದನ್ನು ನಂಬಿದಂತೆಯೇ ನಟಿಸುತ್ತಾಳೆ.

ಹೇಗೂ ಗಂಡ ಹೆಂಡಿರ ವಿರಸ, ಎಲಡಿಕೆ ಉಂಡು ಮುಗಿಯೋತನಕ ಮಾತ್ರ ಅಲ್ಲವೇ?

ಈ ರೀತಿಯಾಗಿ ಡಾಕ್ಟರ ಜೀವನವು ಭೂಲೋಕ, ಬುವ್ವಾಲೋಕ, ಸುವರ್ಣ ಲೋಕ, ಜಾರೋಲೋಕ, ತಪ್ಪೋಲೋಕ, ಕಡೇಗೆ ಸತ್ಯಲೋಕ, ಹೀಗೆ ಸ್ವರ್ಗದತ್ತದ ಸಪ್ತಲೋಕಗಳನ್ನೂ ದಿನಾಲೂ ಅನುಭವಿಸುವ ಯೋಗ ಅಲ್ಪಸಂಖ್ಯಾತ ಡಾಕ್ಟರನ ಪ್ರಾಚೀನ ಪುಣ್ಯವಲ್ಲವೇ?

ಆ್ಞ! ಅವನ ಪ್ರಾಚೀನ ಖರ್ಮ ಎಂದಿರಾ?

— o —



ಕರ್ಣಾಟಕ ಸಂಗೀತದ ಸೊಎಗೆಲ್ಲಾ ಕಣಿವೆ ಕೆಳಗಿನವರಿಂದಲೇ ಸಾಧ್ಯ ಭಾಗವತರೇ!!

ಪ್ರಾಣೇಶ ಪ್ರಸಂಗ

(ಸೋಲಿನಲ್ಲೂ ಗೆಲುವು)

ಸಹಭಾಸ್ ನಗರ ಮತದಾನ ಕ್ಷೇತ್ರ:—

ಒಟ್ಟು ಮತದಾರರು 44680
ಮತ ಕೊಟ್ಟವರು 27225

ಡಾ|| ಕಿಟ್ಟೂರಯ್ಯ	13120
ಗೋಪೀನಾಥಮೂರ್ತಿ (ಉರುಫ್ ಗೋಪಣ್ಣ)	12986
ಕನ್ನೋಜಿ	995
ಅಸಿಂಧು	124

ಗೋಪಣ್ಣ ಪ್ರಾಣೇಶರ ಚುನಾವಣಾ ಪ್ರಕರಣ ಮೇಲ್ಕಂಡ ಫಲಿತಾಂಶದೊಡನೆ ಮುಕ್ತಾಯವಾಯಿತು. ಅಂಗಮೇಲೆ ಒಂದು ಕೂಜಾ ತಣ್ಣೀರು ತರಿಸಿ ಕುಡಿದು, ಮುಸುಕು ಹಾಕಿ ಮಲಗಿದರು ಅಷ್ಟೇತಾನೆ? ಎಂದು ಯಾರಾದರೂ ಹೀಯಾಳಿಸಬಹುದು. "ಪ್ರತಿಪಕ್ಷನವರು ದುಡ್ಡು ಕೊಟ್ಟು ಗೆದ್ದರು", "ಜಾತಿ ಪ್ರಶ್ನೆಯಿಂದ ನಮಗೆ ಸೋಲಾಯಿತು", "ಮತಪೆಟ್ಟಿಗೆಗಳಲ್ಲಿ ಐಬಿತ್ತು", "ನಮ್ಮ ಜನಗಳಿಗೆ ಡೆಮಾಕ್ರಸಿ ಹೇಳಿಸಿದ್ದಲ್ಲ"—ಎಂದು ಮುಂತಾಗಿ ಸೋತವರಾದ ನಾವು "ಸೇಪಗೋಟು"ತನ ತೋರಿಸುತ್ತಿರಬಹುದೆಂದು ನೀವು ಭಾವಿಸಬಾರದು. ಸಾಮಾನ್ಯವಾಗಿ ಸೋತವರಿಗೆ ಹಾಗೆ ಗೊಣಗದೆ ವ್ಯವಧಾನವಿಲ್ಲ. ಅಂಥ ಮಾನಸಿಕ ಪ್ರತಿಕ್ರಿಯೆ ಅನಿವಾರ್ಯ. ನಮ್ಮ ವಿಚಾರದಲ್ಲಿಯೂ ಹಾಗೆಯೇ ಆಗಬೇಕಿತ್ತು. ಆದರೆ ಹಾಗಾಗಲಿಲ್ಲ. ಚುನಾವಣೆಯ ಫಲಿತಾಂಶದ ಕುರಿತು ಮುಖ್ಯಹುರಿಯಾಳುಗಳಾದ ಕಿಟ್ಟೂರಯ್ಯನಿಗೂ ಗೋಪಣ್ಣನಿಗೂ ಒಂದು ರೀತಿಯ ಅನಾಸಕ್ತಭಾವ ಬಂದುಹೋಗಿತ್ತೆಂದರೆ ಯಾರಿಗೂ ಆಶ್ಚರ್ಯವಾಗಬಹುದು. ಎಣಿಕೆಯ ಕೇಂದ್ರಕ್ಕೆ ಅವರಿಬ್ಬರೂ ಹೋಗೇ ಇರಲಿಲ್ಲ. ಎರಡು ಪಕ್ಷದವರಿಂದಲೂ ಗೆದ್ದರೆ ಕೂಡಲೆ ಮೆರವಣಿಗೆ ಹೊರಡಿಸುವ ಯೋಜನೆಗಾಗಿ ಯಾವ ಸಿದ್ಧತೆಯೂ ಇರಲಿಲ್ಲ. (ಕಳೆದ ಚುನಾವಣೆಯಲ್ಲಿ ಕುದುರೆ ಗುರುತಿನ ಕರಿಬಸಪ್ಪ ಮತಗಣನೆ ನಡೆಯುತ್ತಿರುವಾಗಲೇ ತನಗೇ ಗೆಲವೆಂದುಕೊಂಡು ೩೦ ಕುದುರೆಗಳನ್ನು ತರಿಸಿ ಸಿದ್ಧಪಡಿಸಿಟ್ಟಿದ್ದ. ಆದರೆ ನಿರೀಕ್ಷಿಸಿದಂತೆ ಜಯ ದೊರೆಯದಿದ್ದಾಗ 'ಪಾಪ ಹುರುಳಿ ಬೇಯಿಸಿ ಹಾಕಿರೋ' ಎಂದು ಅವುಗಳಿಗೆ ತಲಾ ಆರಾಣೆ ಕೊಟ್ಟು ಜಟಕಾದವರಿಂದ ಥೂಕರಿಸಿಕೊಂಡಿದ್ದು ಈ ಸಂದರ್ಭದಲ್ಲಿ ಜ್ಞಾಪಕಕ್ಕೆ

ಬರುತ್ತದೆ). ನಮ್ಮಲ್ಲಿ ಎರಡೂ ಕಡೆಯ ಹಿಂಬಾಲಕರಿಗೆ ಆತುರವೇ ಹೊರತು ಹುರಿಯಾಳುಗಳಿಗೆ ಉದ್ವೇಗವೇ ಇರಲಿಲ್ಲವೆಂದರೆ ನಂಬುತ್ತೀರೋ ಇಲ್ಲವೋ! ನಿಜವಾಗಿಯೂ ಹಾಗಾಯಿತು! ಆದರೆ ಫಲಿತಾಂಶ ಪ್ರಕಟವಾದೊಡನೆ ಮೆರವಣಿಗೆ ತೆಗೆಯದೆ ಇರಲಿಲ್ಲ. ಎಂಥ ಮೆರವಣಿಗೆ? ಗೆದ್ದ ಸೋತ ಹುರಿಯಾಳುಗಳಿಬ್ಬರೂ ಜೊತೆ ಜೊತೆಗೆ ಕುಳಿತು ಮೆರವಣಿಗೆ ಹೋಗಿದ್ದು! ಎರಡು ಕಡೆಯವರೂ ತಮ್ಮ ತಮ್ಮ ಮುಂದಾಳುಗಳಿಗೆ ಜಯಕಾರ ಹಾಕಿದ್ದಲ್ಲ. ಪ್ರಜಾಪ್ರಭುತ್ವಕ್ಕೆ ಜಯವಾಗಲಿ ಎಂದು ಘೋಷಿಸಿದ್ದು! ಹೌದು, ಇದು ನಮ್ಮೂರಲ್ಲಿ ಮಾತ್ರ ನಡೆಯಿತು! ಅದು ಹೇಗೆ ಸಾಧ್ಯವಾಯಿತೆಂಬುದರ ಗುಟ್ಟು, ಚುನಾವಣೆಗೆ ಎರಡು ದಿನಗಳಿರುವಾಗ ನಡೆದ ಘಟನೆಯೊಂದರಲ್ಲಿದೆ.

ಅವತ್ತು ಕಿಟ್ಟೂರಯ್ಯ ಕಾರು ತೆಗೆದುಕೊಂಡು ಅಪ್ಪಲಾಪುರದ ಕಡೆಗೆ ಹೊರಟಿದ್ದ. ಗೋಪಣ್ಣ ಪ್ರಾಣೇಶರು ಇಬ್ಬರು ಹಿಂಬಾಲಕರೊಡನೆ ಓತಿಕ್ಯಾತನಹಳ್ಳಿಗೆ ಅದೇ ದಾರಿಯಾಗಿ ಜೀಪಿಕೊಂಡು ಹೋಗಿದ್ದರಾದ್ದರಿಂದ ಕಿಟ್ಟೂರಯ್ಯನ ಪ್ರಾಣ ಉಳಿಯಿತು. ಏಕೆಂದರೆ ಕಿಟ್ಟೂರಯ್ಯನ ಕಾರು ಒಂದು ತಿರುವಿನಲ್ಲಿ ಮಗುಚಿಕೊಂಡು ಆತ ಅದರಡಿಯಲ್ಲಿ ಸಿಕ್ಕುಬಿದ್ದಿದ್ದ. ಇಳಿಜಾರು ಪ್ರದೇಶ. ಕಾರು ಇನ್ನೂ ಉರುಳು ವುದರಲ್ಲಿತ್ತು. ಒಂದು ಪೊದೆ ಅಡ್ಡಲಾಗಿದ್ದುದರಿಂದ ಗೋಪಣ್ಣನ ಜೀಪು ಸಮೀಪಿಸುವ ತನಕ ಆತ ಹೇಗೋ ಸುಧಾರಿಸಿಕೊಳ್ಳುವಂತಾಯಿತು. ಕಾರಿನ ಮಗ್ಗುಲಿನಿಂದ ಅವನನ್ನು ಬಿಡಿಸಿ ಜೀಪಿಗೆ ತಂದರು. ಲಕ್ವಾ ಹೊಡೆದಂತಾಗಿತ್ತೇ ಹೊರತು ವಿಶೇಷ ಪೆಟ್ಟಾದಹಾಗೆ ಕಾಣಲಿಲ್ಲ. ಕಾರಿನಲ್ಲಿದ್ದ ಇನ್ನೊಬ್ಬ ಹಳ್ಳಿಯವನೂ ವಿಶೇಷ ಜಖಂ ಗೊಂಡಿರಲಿಲ್ಲ. ಈ ನಡುವೆ ಜೀಪು ತಿರುಗಿಸಿಕೊಂಡು ಊರಿಗೆ ಹೋಗೋಣ ಎಂದರೆ ಕಿಟ್ಟೂರಯ್ಯ ಒಪ್ಪಲಾರ. ಆ ಹಳ್ಳಿಗನ ಮನೆಯಲ್ಲಿ ಒಂದು ಅರ್ಜೆಂಟ್ ಹೆರಿಗೆಯ ಕೇಸು. ಆ ಸ್ಥಿತಿಯಲ್ಲಿಯೂ ಅಲ್ಲಿಗೆ ಹೋಗಿ ಅಲ್ಲಿನ ಕೆಲಸ ತೀರಿಸಿಯೇ ಹಿಂದಿರುಗ ಬೇಕಾಯಿತು. ಅಲ್ಲಿ ಪುತ್ರೋತ್ಸವವಾದೊಡನೆ ಮಗುವಿಗೆ "ಪ್ರಾಣನಾಥ್" ಎಂದು ಹೆಸರಿಡುವಂತೆ ಸೂಚಿಸಿದ್ದು ಮಾತ್ರವಲ್ಲದೆ ನಾಳಿದ್ದು ನಿಮ್ಮೂರವರೆಲ್ಲ ಇವರಿಗೆ ಓಟು ಕೊಡಬೇಕೆಂದು ಗೋಪಣ್ಣನನ್ನು ತೋರಿಸಿ ಹೇಳಿದನಂತೆ. ಪ್ರಾಣವುಳಿದದ್ದಕ್ಕಾಗಿ ಕಿಟ್ಟೂರಯ್ಯನಿಗೆ ಗೋಪಣ್ಣನ ಕುರಿತು ಆ ಬಗೆಯಲ್ಲಿ ಎದೆ ತುಂಬಿಬಂದರೆ, ಗೋಪಣ್ಣ ಪ್ರಾಣೇಶರಿಗೆ ಕಿಟ್ಟೂರಯ್ಯನ ಕುರಿತು ಬೇರೆಯೇ ಕಾರಣಕ್ಕಾಗಿ ಆದರವುಂಟಾಯಿತು. ಪುಣ್ಯಾತ್ಮ ಈ ಚುನಾವಣೆಯ ಗಲಭೆಯಲ್ಲಿದ್ದರೂ ದೂರದ ಹಳ್ಳಿಗೆ ಚಿಕಿತ್ಸೆಗಾಗಿ ಹೊರಟಿದ್ದು ಮಾತ್ರವಲ್ಲದೆ ತಾನು ಅವಘಡಕ್ಕೊಳಗಾದ ಮೇಲೂ ಕರ್ತವ್ಯವನ್ನು ಮರೆಯಲಿಲ್ಲವಲ್ಲ ಎಂಬುದೇ ಆ ಆದರಕ್ಕೆ ಕಾರಣವಾಯಿತು. ಚುನಾವಣೆಯಲ್ಲಿ ತಾವೇ ಉಮೇದ್ವಾರಿಗಳಲ್ಲದಿದ್ದರೂ ಇತರರ ಹಿಂಬಾಲಕರಾಗಿ ಪರದಾಡಿ ಪ್ರಚಾರ ಕೈಗೊಳ್ಳುವ ಭರದಲ್ಲಿ ಎಷ್ಟೋ ಡಾಕ್ಟರುಗಳು ತಮ್ಮ ರೋಗಿಗಳಿಗೆ ತಿರುಪತಿ ಕ್ಷವರದ ಏರ್ಪಾಡು ಮಾಡಿರುವುದುಂಟು. "ಎಲೆಕ್ಷನ್ ಮುಗಿಯಲಿ ಇಂಜಕ್ಷನ್ ಪ್ರಾರಂಭಿ

ಸೋಣ"—ಎಂಬ ಸ್ಲೋಗನ್ನೇ ಇದೆ ಒಂದೂರಿನಲ್ಲಿ! ಹಾಗಿರುವಾಗ ಕಿಟ್ಟೂರಯ್ಯನ ಕರ್ತವ್ಯನಿಷ್ಠೆ ಆದರಣೀಯವಲ್ಲವೆ? ಇಂಥವನು ಜನ ಪ್ರತಿನಿಧಿಯಾಗುವುದಾದರೆ ನಾವು ಸೋತರೂ ನಷ್ಟವಿಲ್ಲ ಎಂಬ ಭಾವನೆಯುಂಟಾಯಿತು. ಅದೇ ದಿನ ರಾತ್ರಿ ಕಿಟ್ಟೂರಯ್ಯ ಅನಿರೀಕ್ಷಿತವಾಗಿ ಕಾರು ತೆಗೆದುಕೊಂಡು ನಮ್ಮಲ್ಲಿಗೆ ಬಂದು "ತಡವಾದರೂ ಚಿಂತೆಯಿಲ್ಲ, ನಾನು ನಿಮ್ಮ ಪರವಾಗಿ ಉಮೇದ್ವಾರಿಕೆಯನ್ನು ಹಿಂದೆ ತೆಗೆದುಕೊಳ್ಳಬೇಕೆಂದಿದ್ದೇನೆ" ಎಂದಾಗ ನಮ್ಮ ಆದರ ಪೂಜ್ಯಭಾವಕ್ಕೆ ತಿರುಗಿತು. "ಇದರಲ್ಲಿ sentimentsಗೆ ಅವಕಾಶವಿಲ್ಲ ಡಾಕ್ಟರ್. ಇಲ್ಲಿ ನಮ್ಮ ನಿಮ್ಮ ವೈಯಕ್ತಿಕ ಭಾವನೆಗಳಿಗೆ ಪ್ರಾಮುಖ್ಯವಿಲ್ಲ ಆದ್ದರಿಂದ ಸದ್ಯ ಯಾವ ಬದಲಾವಣೆಯೂ ಕೂಡದು. ಹಾಗೇನಾದರೂ ಮಾಡಿದರೆ ನೀವು ನಿಮ್ಮ ಪಕ್ಷವನ್ನೂ ನಿಮಗೆ ಬೆಂಬಲಕೊಟ್ಟವರನ್ನೂ ಒಂದು ರೀತಿಯಲ್ಲಿ ವಂಚಿಸಿದಂತಾಗುತ್ತದೆ" ಎಂದೆಲ್ಲ ಬಹು ಗಂಭೀರವಾಗಿ ಪ್ರಾಣೇಶ ಹೇಳಿದಮೇಲೆ ಕಿಟ್ಟೂರಯ್ಯ ಒಪ್ಪಬೇಕಾಯಿತು. ಆ ಮಾತುಗಳನ್ನೆಲ್ಲ ಅಷ್ಟೊಂದು ಗಂಭೀರವಾಗಿ ಆತ ಆಡುವಾಗ ನನಗೆ ಬಹಳ ಸಂತೋಷವಾಯಿತು ಏಕೆಂದರೆ ಆ ದಿನ ಮಧ್ಯಾಹ್ನವಷ್ಟೆ ಪ್ರಾಣಿ ಕಿಟ್ಟೂರಯ್ಯನ ಮೇಲೆ ಉರಿ ಕಾರುತ್ತಾ ಇದ್ದ. ದೇವರು ಮನಸ್ಸುಮಾಡಿದರೆ ಡಲ್ಲೇಶ್ ಕೃಷ್ಣೇವ ರನ್ನೂ ಒಂದಾಗಿ ಬೆಸೆಯಬಲ್ಲ!

ಮಾರನೆ ದಿನದಿಂದ ನಮ್ಮೂರಿನ ಚುನಾವಣಾ ಪ್ರಚಾರದ ಒಣ್ಣವೇ ಬದಲಾಗಿ ಹೋಯಿತು. ಮುಂದಾಳುಗಳಂತೂ ತೀರ ತಟಸ್ಥರೆಂಬಂತೆ ಕುಳಿತರು. ಕಾರ್ಯಕರ್ತರು ಮಾತ್ರ ಮತ್ತೂ ಕೊಂಚ ಪ್ರಚಾರಮಾಡಿದರು. ಆದರೆ ಮೊದಲಿನ ಉಗ್ರತೆಯೆಲ್ಲ ಮಾಯವಾಗಿ ಹೋಗಿತ್ತು. ಕಿಟ್ಟೂರಯ್ಯನ ವರ್ತನೆ ಅವನ ಪಕ್ಷದವರಿಗೆ ಸರಿಬೀಳ ಲಿಲ್ಲ. ಆದರೂ ಆತ ಮೊದಲಿನ ಬಿರುಸಿಗೆ ಮನವೊಪ್ಪದವನಾಗಿದ್ದ. ನಮಗೂ ಹಾಗೆಯೇ. ಮೊದಲು ಸ್ಪರ್ಧೆಯ ವಿಷ ಎಷ್ಟರಮಟ್ಟಿಗೆ ಏರಿತ್ತೆಂದರೆ ಕಿಟ್ಟೂರಯ್ಯನ ಕಾರು ಅಪಘಡಕ್ಕೀಡಾದದ್ದನ್ನು ಕೇಳಿದೊಡನೆ ಮನೆಯಲ್ಲಿ ಹಾಸಿಗೆ ಹಿಡಿದಿದ್ದು 'ಮ್ಯಾಡಂಕ್ಯೂರಿ' ಓದುತ್ತಿದ್ದ ಪ್ರಾಣೇಶನ ಹೆಂಡತಿ "accidentಏ? ಬಲು ಭೇಷಾಯಿತು" ಎಂದು ಹಿಗ್ಗಿಬಿಟ್ಟಿದ್ದಳು! ಏಕೆ, ಮನೆಯೊಳಗಿನ ಮುದುಕಿ ಕೂಡ "ಇನ್ನಾದರೂ ಕೊಂಚ ಸುಧಾರಿಸಿಕೊಳ್ಳಿರೊ" ಎಂದಿದ್ದರು!

ಪ್ರಾರಂಭದಲ್ಲಿ ನಡೆದ ಪ್ರಚಾರಕ್ಕೆ ದಿಕ್ಕು ಮುಖವಿದೆಯೆ? ದುಡ್ಡು ಜಾತಿ ಎಲ್ಲವೂ ಪ್ರವೇಶಿಸಿದವು. ಮನೆಮನೆಗೆ ನುಗ್ಗಿ ಪ್ರಚಾರ ನಡೆಯಿತು. ಅದರಿಂದ ದೊರೆತ ಅನುಭವಗಳ ರಾಶಿಯನ್ನು ಬರೆದಿಟ್ಟರೆ ಭಾರತವಾದೀತು. ಅಂಜಿಕೆ ನಾಚಿಕೆ ಎಲ್ಲಾ ಮಾಯವಾಗಿ ನಮ್ಮೆಲ್ಲರ ಚರ್ಮ ಕಾಲಿಂಚಿನಷ್ಟಾದರೂ ಹೆಚ್ಚು ದಪ್ಪವಾಗಿರ ಬೇಕು ಆ ಅವಧಿಯಲ್ಲಿ—ಮನೆಮನೆಗೆ ಹೋದಾಗ ನಗುಮುಖ, ನರಿಮುಖ, ದೇಶಾವರಮುಖ, ರುದ್ರಮುಖ, ಬೆಪ್ಪುಮುಖ, ಭಯ ತುಂಬಿದ ಮುಖ, ತಾತ್ಸಾರದ

ಮುಖ, ದರ್ಪಮುಖ, ದೆವ್ವಮುಖ....ಥೂ. ಥೂ....ಥೂ....ಎಲ್ಲ ಬಗೆಯ ಮುಖಗಳೂ ಕಣ್ಣಿಗೆ ಬಿದ್ದವು. ನಿಮಗೆ ಸಾಲ ಎಷ್ಟಿದೆ ಎಂಬುದರಿಂದ ತೊಡಗಿ ನಿಮಗೆಲ್ಲಾ ಮದುವೆಯಾಗಿದೆಯೇ ಎಂಬವರೆಗಿನ ಪ್ರಶ್ನೆಗಳನ್ನೆಲ್ಲಾ ಉತ್ತರಿಸಬೇಕಾಯಿತು. ಆಹಾ ಎಂಥ ಅಗ್ನಿಪರೀಕ್ಷೆ! ಒಬ್ಬ ಅಜ್ಜಯ್ಯ ಹೇಳಿದರು "ಲ್ರೋ ನಿಮಗೆ ಎಮ್ಮೆಲ್ಲೆ ಆಗಬೇಕು, ಪ್ರಸಿದ್ಧಿ ಪಡೀಬೇಕು ಎಂಬ ಆತುರ. ಅದಕ್ಕೇ ಪರದಾಡ್ತೀರಿ ಹೀಗೆ. ನಮಗೇನ್ರೋ ಇದೆ?"

ಅದಕ್ಕೆ ಪ್ರಾಣೇಶ ಹೇಳಿದ. "ನಿಮಗೂ ಪ್ರಸಿದ್ಧಿ ಕೊಡೋಣ ಯಜಮಾನರೆ. ಬೇಕಾದರೆ ನಿಮ್ಮನ್ನು ಪಾಲಕಿಯಲ್ಲಿ ಹೊತ್ತುಕೊಂಡು ಹೋಗ್ತೀವಿ. ನಮ್ಮೂರಿನಲ್ಲಿ 110 ವಯಸ್ಸಿನ ಇಂಥವರು ಬಂದು ವೋಟು ಕೊಟ್ಟರು ಅಂತ ಪೇಪರಲ್ಲಿ ಹಾಕಿಸ್ತೀವಿ ನಿಮ್ಮ ಹೆಸರನ್ನ. ಆಗ ದೇಶದಾದ್ಯಂತ ಮೊಳಗುತ್ತೆ ನಿಮ್ಮ ಹೆಸರು"— ಎಂದ.

60ರ ಮುದುಕಯ್ಯ ಹುಬ್ಬುಗಂಟಿಕ್ಕಿ ಬೆಳ್ಳಿಹಿಡಿಯ ಬಡಿಗೆ ಎತ್ತಿದಾಗ ನಾವು ದಡಬಡನೆ ಅಲ್ಲಿಂದ ಎದ್ದು ಬಂದೆವು. ಕೊನೆಗೆ ವಿಚಾರಿಸಿದರೆ ಮುದುಕಯ್ಯನಿಗೆ ಮೂರನೆಯ ಮದುವೆಯಾಗಿ ಮೂರೇ ವರ್ಷಗಳಾಗಿದ್ದುವಂತೆ. ಇಂಥ ಸ್ವಾರಸ್ಯಗಳನ್ನು ಬೆಳಸಿದರೆ ಅವಕ್ಕೆ ಮುಗಿವೇ ಇಲ್ಲ.

ಅಂತೂ ಚುನಾವಣೆ ಮುಗಿಯಿತು. ಮತಗಣನೆಯದಿನ ನಾವು ಊಟಕ್ಕೆ ಕಿಟ್ಟೂರಯ್ಯನ ಮನೆಗೆ ಹೋಗಿದ್ದೆವು. ಅಲ್ಲಿರುವಾಗಲೇ ಫಲಿತಾಂಶ ತಿಳಿಯಿತು. ಗೋಪಣ್ಣನೇ ಮೊದಲು ಕಿಟ್ಟೂರಯ್ಯನನ್ನು ಜಯಶಾಲಿಯೆಂದು ಅಭಿನಂದಿಸಿದ್ದು. ಅಲ್ಲಿಂದಲೇ ಮೆರವಣಿಗೆ. "ಜಯ ನಮ್ಮದು ಮಾತ್ರವಲ್ಲ; ನಿಮ್ಮದೂ ಹೌದು" ಎಂದ ಕಿಟ್ಟೂರಯ್ಯ. ನಮಗೂ ಹೆಚ್ಚುಕಡಮೆ ಹಾಗಂತಲೇ ಸಮಾಧಾನ.

ಈ ನಡುವೆ ಪ್ರಾಣೇಶನ ಹೆಂಡತಿ ಪ್ರಕೃತಿ ನಿಯೋಜಿತವಾಗಿ ಚುನಾವಣೆಯ ಬಿರುಸಿನಿಂದ ಕೊನೆ ಕೊನೆಗಾದರೂ ದೂರವಾಗಿ, ಮನೆಯಲ್ಲಿ ಮಲಗಬೇಕಾಗಿ ಬಂದುದು ಸಮಾಧಾನದ ವಿಷಯ. ಕಿಟ್ಟೂರಯ್ಯನೇ ಪರೀಕ್ಷೆಮಾಡಿ morning sickness ಎಂದು ಮುಗುಳ್ನಕ್ಕು ಪ್ರಾಣೇಶನನ್ನು ಅರ್ಥಗರ್ಭಿತವಾಗಿ ಅಭಿನಂದಿಸಿ ಹೋಗಿದ್ದಾನೆ. ಗೌರತ್ತೆ ಆ ಸೂಚನೆ ಮೊದಲೇ ಕೊಟ್ಟಿದ್ದರೆನ್ನಿ.

ಕೊನೆಯದಾಗಿ ಒಂದು ಗುಟ್ಟಿನ ವಿಷಯ. ಚುನಾವಣೆಯಿಂದಾಗಿ ಕೈಬಿಟ್ಟ ಹನ್ನೆರಡುಸಾವಿರವನ್ನು ಕಿಟ್ಟೂರಯ್ಯ ಗೋಪಣ್ಣನಿಗೆ ತುಂಬಿಸಿಕೊಟ್ಟಿದ್ದಾನೆ. 'ನವದುಂಧುಭಿ'ಗೂ ಒಳ್ಳೆಯ ಭವಿಷ್ಯಕಾದಿದೆ. ಅದರ ಉಗ್ರತೆಯೆಲ್ಲ ಇಳಿದುಹೋಗಿದೆ ಯಾದರೂ ಸಪ್ಪೆಯಾಗಲು ಪ್ರಾಣೇಶ ಬಿಡಲಾರ.

ಆದರೆ ತಿಂಗಳೆರಡರ ಚುನಾವಣಾ ಹೋರಾಟಕ್ಕೆ ಅರ್ಥವೇನು ಎಂದೆಣಿಸಿ ತಲೆ ತುರಿಸುವುದಾಗಿದೆ ನಮ್ಮ ಪಾಡು.

— ರಾಮಿ.

ಮುಗಿಲುಹಳ್ಳಿಯಲ್ಲಿ ಚುನಾವಣೆ

(ಸ್ವಪ್ನಸುಂದರೀ ವಿಜಯ)

ಮಾರ್ಚ್ ತಿಂಗಳ ಮೊದಲ ನಾಲ್ಕುದಿನ ಮುಗಿಲುಹಳ್ಳಿಯಲ್ಲಿ, ರಾಜಕೀಯ ಅಫರಾ ತಫರಾ ನಡೆದುದು ಲೋಕದ ಗಮನಕ್ಕೆ ಬಂದಿರಲೇಬೇಕು. ಈ ಕಾಲ— ಉಲ್ಲೂಕ ರಾಸಭಗಳ ಸುವರ್ಣಯುಗ.

ಪೂರ್ವ ನಿರ್ಣಯಗಳಿಗನುಸಾರವಾಗಿ ಕತ್ತೆ ಗೂಗೆಗಳ ಪ್ರಚಂಡ ಮೆರವಣಿಗೆಗಳು ಅಗ್ನೀ ತುರುಸಿನಿಂದ ನಡೆದು ಭೂವ್ಯಾಕಾಶಗಳು ನಡುಗಿದವು. ಕತ್ತೆ ಪಾರ್ಟಿಯು ಗುಡಾರದಲ್ಲೂ, ಗೂಗೆ ಪಾರ್ಟಿಯ ಟೆಂಟಿನಲ್ಲೂ ಅನುಕ್ರಮವಾಗಿ ಇಪ್ಪತ್ತು ಇಪ್ಪತ್ತು ಪಲ್ಲ ಮುಂಡಕ್ಕಿ ಉಸುಳಿ ಹತ್ತು ಹತ್ತು ಡ್ರಂ ಚಹಾಗಳ ಸಮಾರಾಧನೆ ಅತ್ಯಂತ ವಿಜೃಂಭಣೆಯಿಂದ ಪ್ರತಿದಿನವೂ ನಡೆದವು. ಜಿಲ್ಲೆಯ ಮೂಲೆ ಮೂಲೆಗಳ ಮುತ್ತುಗದ ಮರಗಳನ್ನಲಂಕರಿಸಿದ್ದ ಗೂಗೆಗಳು ಮುಗಿಲುಹಳ್ಳಿಯ ಬೀದಿಗಳಲ್ಲಿ ಪಂಜರದರಮನೆಯ ವೈಭವವನ್ನು ಮೆರೆದವು. ಮೈತೊಳೆದ ಕತ್ತೆಗಳು ಮಲ್ಲಿಗೆಹೂಮಾಲೆಯನ್ನು ಧರಿಸಿ ಅರಿಸಿನ ಕುಂಕುಮಗಳನ್ನು ಧರಿಸಿ ಬೀದಿಯಲ್ಲಿ ಮೆರೆದವು. ಕತ್ತೆಗಳು ಜನ್ಮದಲ್ಲೇ ಪ್ರಥಮವಾಗಿ ಮಾಲದೀ ಉಂಡೆಗಳನ್ನು ತಿಂದವು ಗೂಗೆಗಳು ಬಾದಾಮಿಹಾಲು ಕುಡಿದವು.

ತನ್ನ ಹಿಂಬಲಿಗರನ್ನು ಹುರುಪುಗೊಳಿಸಲು, ಅವರೆಲ್ಲರಿಗೂ ಗೂಗೆ ಬಸಣ್ಣ ಚುನಾವಣಾ ನೀಡಿಕೆಯಾಗಿ ಒಂದೊಂದು ಪಂಜರದ ಗೂಗೆಯನ್ನು ದಯಪಾಲಿಸಿದ. ಈ ಸುದ್ದಿಯನ್ನು ಕೇಳಿ ರೋಷದಿಂದ ಸಿಡಿದೆದ್ದ ಸಂಕಣ್ಣ ಘೋಷಿಸಿದ :—

ಮಿತ್ರರೇ, ಗೆಳೆಯರೇ, ಸ್ನೇಹಿತರೇ, ದೋಸ್ತುಗಳೇ, ಕಾಮ್ರೇಡರೇ, ಫ್ರೆಂಡುಗಳೇ ನಿಮಗೆಲ್ಲ ಒಂದೊಂದು ಕತ್ತೆಯನ್ನು ಸಾಲಂಕೃತವಾಗಿ ಇದೋ ದಾನ ಮಾಡಿದೇನೆ.

ಮುಗಿಲುಹಳ್ಳಿಯ ಈ ಮನೆಯನ್ನು ನೋಡಿ. ಸಾಲಂಕೃತ ಕತ್ತೆಯೊಂದು ಅದರ ಮುಂದೆ ನಿಂತು ಮಾಲದಿ ತಿನ್ನುತ್ತಿದೆ. ಆ ಮನೆಯೆದುರು ಕತ್ತೆಯಿಲ್ಲವೇ? ಅದರ ಪಡಸಾಲೆಗೆ ಹೋಗಿ ನೋಡಿ. ಗೂಗೆ ಪಂಜರವಿದ್ದೇ ಇದೆ.

ಓಟುಗಳನ್ನು ಖಾತ್ರಿಮಾಡಿಕೊಳ್ಳಲೆಂದು ಸಂಕಣ್ಣ ಹೀಗೆಂದು ಎಚ್ಚರಿಕೆ ಕೊಟ್ಟ :—ರಾಸಭೇಶ್ವರನು ಜಾಗ್ರತದೈವ. ಕತ್ತೆಗೆ ಓಟು ಕೊಡದ ಅವನ ಭಕ್ತರು ದೈವದ ಕೋಪಕ್ಕೀಡಾಗುವುದು ಖಂಡಿತ.

ಬಸಣ್ಣ ಬಿಟ್ಟಾನೇ. ಅವನು ಹೇಳಿದುದು ಹೀಗೆ:—ಉಲ್ಲೂಕ ಭಕ್ತರೇ ಗೂಗೆಗೆ ಓಟು ಕೊಡದಿದ್ದರೆ, ನಿಮಗೆ ಇಹವಿಲ್ಲದಂತೆ ನಾನೂ, ಪರವಿಲ್ಲದಿರುವಂತೆ ಉಲ್ಲೂಕೇಶ್ವರನೂ ವ್ಯವಸ್ಥೆಮಾಡುತ್ತೇವೆ"

ಇದರಿಂದ ರಾಯನಿಗೆ ಪ್ರಬಲವಾದ ಕಂಟಕ ಬಂತು. ಸ್ತ್ರೀಯರಿಗೆ ಕೈಕಟ್ಟಿ ಹೋಯಿತು. ರಾಯನಿಗೆ ಓಟು ಕೊಡುವ ಇಚ್ಛೆ ಅವರಿಗಿದ್ದರೂ, ದೈವಭಯದಿಂದ ಅವರು ನಿಸ್ಸಹಾಯಕರಾದರು. ರಾಯನ ಅದೃಷ್ಟದೇವತೆ ನೋವಿನಿಂದ ನರಳಿದಳು.

ಈ ಮಧ್ಯೆ ರಾಯ ಒಂದು ಹೇಳಿಕೆ ಹೊರಡಿಸಿದ. "ನಾನು ಬಾಯಿತಪ್ಪಿ ಆಡಿದ ಒಂದು ಮಾತನ್ನು ನನ್ನ ಅಕ್ಕಂದಿರು ತಪ್ಪಾಗಿ ತಿಳಿದು ನನ್ನಮೇಲೆ ಸಿಟ್ಟಾಗಿದ್ದಾರೆ. ನಾನು ಸ್ತ್ರೀಯರ ಒಂದು ಪಂಗಡವನ್ನು ಅವಹೇಳನೆ ಮಾಡಿದೆನೆನ್ನುವುದು ತಪ್ಪು ತಿಳುವಳಿಕೆ. ಶ್ರೀಮತಿ ಕರಿಬಸಕ್ಕನವರು ಮತ್ತು ಅವರ ಗೆಳತಿಯರು ಮಾಡುವ ಮುಳುಗಾಯಿ–ಎಣಗಾಯಿ, ಡೊಣೆಗಾಯಿ, ಝುಣಕ, ಕಡಲೆಕಾಳು ಉಸುಳಿಗಳ ರುಚಿಯನ್ನರಿತ ಯಾರುತಾನೇ ಅವರನ್ನು ಟೀಕಿಸಿಯಾರು? ಪೂರ್ವಪದ್ಧತಿಯ ಸ್ತ್ರೀಯರು ತಮ್ಮ ಉಡಿಗೆ ತೊಡಿಗೆ, ಅಲಂಕಾರಗಳಲ್ಲಿ ಕೊಂಚ ಸುಧಾರಿಸುವುದು ಅವಶ್ಯಕ ಎಂಬುದೇ ನನ್ನ ಅಭಿಪ್ರಾಯ. ಇನ್ನೇನೂ ಅಲ್ಲ."

ಈ ಹೇಳಿಕೆಯಿಂದ ದಡ್ಡಹೆಂಗಸರು ಸುಪ್ರೀತರಾದರು. ಆದರೆ ಅವರ ಓಟುಗಳು ರಾಯನಿಗೆ ಸಿಗುವಂತಿಲ್ಲ. ದೈವಭಯ!

ಈ ಮಧ್ಯೆ ಬೇಸಗೆಯ ಬಿಸಿಲು ಮಿತಿಮೀರಿತು. ಸೆಕೆ, ದೂಳು, ಬೆವರು, ಹೊಗೆ, ಸೊಳ್ಳೆ, ನೊಣ, ಇಲಿ, ಹೆಗ್ಗಣ, ನಾಯಿ, ಚರಂಡಿವಾಸನೆ, ರೇಡಿಯೋ ಗೀತೆ, ಲಾರಿಗಳ ಗರ್ಜನೆ, ಮೆರವಣಿಗೆ, ಘೋಷಣೆ, ಪ್ರತಿಘೋಷಣೆ, ಆಪಾದನೆ, ಪರಸ್ಪರ ನಿಂದನೆ, ವಾಗ್ಯುದ್ಧ, ದೃಷ್ಟಿಯುದ್ಧ, ಮುಷ್ಟಾಮುಷ್ಟಿ, ಕೇಶಾಕೇಶಿಗಳಿಂದ, ಮುಗಿಲು ಹಳ್ಳಿಯ ಹಗಲುಗಳು ಅಸಹನೀಯವಾದವು. ತಗುಣೆ, ಚಿಕ್ಕಾ, ಸೆಕೆ, ಬಿಸಿಗಾಳಿ, ಬೆವರು, ಧಗೆ, ಅಳು, ಪಂಜಿನ ಮೆರವಣಿಗೆ, ಅಂತಃಕಲಹಗಳ ರಾತ್ರಿಗಳು ಮುಗಿಲು ಹಳ್ಳಿಯ ಜೀವನಾಡಿಯನ್ನೇ ಅಲುಗಿಸಿದವು. ಸ್ತ್ರೀಯರಿಗಂತೂ ಈ ಸನ್ನಿವೇಶ ತ್ರಾಸದಾಯಕವಾಗಿತ್ತು. ಹಗಲೆಲ್ಲಾ ದುಡಿದು, ಹರಟೆ ದಣಿದ ಅವರು ರಾತ್ರಿ ಬಂದ ಕೂಡಲೇ ಹಾರಿದ ತಗುಣೆಗಳಿಗೆ ಎಡೆನೀಡಲೆಂದು ಡಿಡಿಟಿ, ಗೆಮ್ಯಾಕ್ಸಿನ್, ಹೆಕ್ಸಡಾಲ್ TNT, ಸಯನೋ ಗ್ಯಾಸುಗಳನ್ನ ಪಿಸಿಸಿ, ಅಳುವ ಮಕ್ಕಳನ್ನು ಸಂತೈಸಿ ಇನ್ನೇನು ಕಣ್ಣೆವೆಗಳನ್ನು ಕೂಡಿಸಲಿದ್ದಾರೆ. ಅದೋ ನಿಶೆಯೊಡಲನ್ನು ಭೇದಿಸಿ, ನಿದ್ರೆಯನ್ನು ಸಂಹರಿಸಲೆಂದು ಊರತುದಿಯ ಮನೆಯ ಕತ್ತೆ ಕೂಗಿತು. ಅದರ ಮಿತ್ರರು ಅದಕ್ಕೆ ಉತ್ತರವನ್ನಿತ್ತರು. ಪಂಜರದ ಗೂಗೆಗಳು ಘೂ ಘೂಕ್ ಎಂದು ಆರ್ತನಾದವನ್ನು ಮಾಡಿದವು. ರಾತ್ರಿಯ ಸುಳಿಗಾಳಿ ತರಗೆಲೆ ಧೂಳುಗಳೊಡನೆ ಈ ಶಬ್ದ ಕೋಲಾಹಲ

ವನ್ನು ಹೊತ್ತುತಂದಿತು. ನಿದ್ದೆ ಮಂಗಮಾಯ. ಎಲ್ಲಿಗೋ ಪೋಚಿ. ರಾತ್ರಿಯೆಲ್ಲಾ ಇದೇ ಹಾಡು. ಮುಗಿಲುಹಳ್ಳಿಗೆ ಪ್ರೇತಕಳೆ ಬಂತಲ್ಲಾ ಎಂದು ವೃದ್ಧರು ಚಿಂತೆಗೀಡಾದರು.

"ಪ್ರತಿಗಾಮೀ ಶಕ್ತಿಗಳ ಕರಾಳ ತಾಂಡವ ನಡೆಯುತ್ತಿದೆ. ಪ್ರಜಾಪ್ರಭುತ್ವ ಶಾಂತಿಗಳಿಗೆ ಕಂಟಕ ಬಂದಿದೆ. ಈ ಅನ್ಯಾಯವನ್ನು ತಡೆಯುವವರಿಲ್ಲವೇ? ದಬ್ಬಾಳಿಕೆಗೆ ಹಿಡಿತವೇ ಇಲ್ಲವೇ? ಮಾನವತೆ ನಾಶವಾಯ್ತೇ? ಅಯ್ಯೋ! ರಾಯರಿಗೆ ಜಯವಿಲ್ಲವೇ?" ಎಂದು ಸಂಪಾದಕಿ ಸುಚಿತ್ರಾ ತನ್ನ ಕೈಬರಹದ ಮಾಸಪತ್ರಿಕೆಯ ಸಂಪಾದಕೀಯದಲ್ಲಿ ಬರೆದಳು. ಅವಳ ಅರಿವುಗೇಡಿತನವನ್ನು ಕಂಡು ರಾಸಭೇಶ್ವರ, ಉಲ್ಲೂಕೇಶ್ವರರು ತಮ್ಮ ಮೀಸೆಯನ್ನು ತಿರುವಿ ವಿಕಟಾಟ್ಟಹಾಸ ಮಾಡಿದರು.

ಮಾರ್ಚ್ ಐದರಂದು ಮುಗಿಲುಹಳ್ಳಿಯಲ್ಲಿ ಗೂಗೆ ಕತ್ತೆಗಳ ಅಭೂತಪೂರ್ವ ಲಲಿತ ಪ್ರಚಂಡ ಮೆರವಣಿಗೆಯಾಯ್ತು.



ಸಿನ್‌ಸಿನ್ನ್ಯಾಟಿ ಸರ್ಕಲಿನಲ್ಲಿ ಎರಡು ಪಕ್ಷದವರೂ ನೆರೆದು ಕೈಕೈಮಿಲಾಯಿಸಿದರು. ಕಾರುಗಳೂ, ಕತ್ತೆಗಳೂ, ಗಡವರೂ, ಗೂಗೆಗಳೂ, ಘರ್ಷಿಸಿ ಅನೇಕ ಕತ್ತೆ ಗೂಗೆಗಳಿಗೂ, ಕಾರುಗಳಿಗೂ, ಜಖಂ ಆಯ್ತು. ಕೂಗಿ ಕೂಗಿ ಗಂಟಲುಗಳೊಡೆದವು. ಬಡಿದು ಬಡಿದು ಡೊಳ್ಳುಗಳು ಮುರಿದವು. ತುತೂರಿ ಬ್ಯಾಂಡುಗಳು ಉಗುಳಿನಿಂದ ನೆನೆದುಹೋದವು. ಈ ಅವಸ್ಥೆಯನ್ನು ನೋಡಲಾರದೆ ಸೂರ್ಯ ಮುಳುಗಿದ. ವಿದ್ಯುದ್ದೀಪಗಳ ಜೊತೆಗೆ ಪಂಜುಗಳೂ ಹೊತ್ತಿದವು ಊರಿನ ಅಬಾಲವೃದ್ಧರೂ ಅರಚುತ್ತಾ ಕುಣಿದರು. "ಮಹನೀಯರೇ ನಾನು–ನೀವು–ಓಟು–ಸೇವೆ–ಈಗಾ—ದೇಶದ ಬಿಕ್ಕಟ್ಟಿನಲ್ಲಿ—ನಾನು — ನೀವು" ಎಂದು ಸಾವಿರ ಮೈಕುಗಳು ಒದರಿದವು. ಕತ್ತೆ ಗೆಲ್ಲುವುದು ಖಂಡಿತ ಎಂದೂ, ಗೂಗೆ ಗೆಲ್ಲುವುದು ನಿಶ್ಚಿತ ಎಂದೂ, ಸಾವಿರಾರು ರೂಪಾಯಿಗಳ ಪಂದ್ಯಕಟ್ಟಲಾಯಿತು ಒಂಬತ್ತೂವರೆಯವರೆಗೆ ಈ ಪ್ರವೋಗ್ಯಾಂಡ ನಡೆದು ಎರಡು ಪಕ್ಷದವರೂ ಸುಸ್ತಾಗಿ, ಇನ್ನು ಸಾಕು ಎಂದರು. ರಾಯನ ಶೇವಿಂಗ್ TTK ಪಾಲು ಎಂದು ಎಲ್ಲರೂ ಘೋಷಿಸಿದರು.

ಚುನಾವಣಾ ಪ್ರಚಾರ ನಾಟಕದ ತೆರೆ ಬಿತ್ತು

ತೆರೆ ಮೇಲೆದ್ದಾಗ ರಾತ್ರಿ ಹತ್ತುಗಂಟೆ. ರಂಗದಮೇಲೆ ಒಂದು ಮೆರವಣಿಗೆ ಹೊರಟು ನಿಂತಿದೆ. ಮೆರವಣಿಗೆಯ ಉದ್ದೇಶ್ಯ—ಒಂದು ಮದುವೆ. ನಾಯಕ ಉಲ್ಲೂಕೇಶ್ವರ ಪಾದಾರವಿಂದ ಮಧುಕರ. ತಂದೆ ಲಕ್ಷಾಧೀಶ. ನಾಯಕಿ–ರಾಸಭೇಶ್ವರ ಕೃಪಾಪೋಷಿತೆ. ತಂದೆ ಲಕ್ಷಾಧೀಶ. ಇಂತಹ ಮದುವೆ ಸಾಧ್ಯವಾದುದು ಹೇಗೆ? ಉತ್ತರ-ಪ್ರೇಮವಿವಾಹ. ಇಂದೇ ಏಕೆ? ಉತ್ತರ–ಮುಂದೆ ಪ್ರಶಸ್ತ ಮುಹೂರ್ತಗಳಿಲ್ಲ.

ಮೆರವಣಿಗೆಗೆಂದು ನಾಗರಕೊಯಿಲಿನ ನಾಗಸ್ವರ, ಗುಳೇದಗುಡ್ಡದ ಬ್ಯಾಂಡ್ ಸೆಟ್, ಹೆಗಡೇಹಾಳಿನ ಸೊನಾಯ ಬಂದಿದ್ದವು. ಐದುನೂರು ಪೆಟ್ರೋಮಾಕ್ಸ್‌ಗಳು. ಊರಿನ ಎಲ್ಲ ಪಕ್ಷಗಳ ಜನರೂ ಭಾಗವಹಿಸಿ ನಿಂತಿದ್ದರು. ಮುಂದೆ ಎರಡು ಸಾಲು ಗಳಾಗಿ ನೂರಾರು ಕಾರುಗಳು. ನಡುವೆ ಕ್ಯಾಡಿಲಾಕ್ (ಓಪನ್ ಕಾರ್)ನಲ್ಲಿ ರತಿ ಮನ್ಮಥರಂತೆ ವರ ವರಿಯರು. ಹಿಂದೆ ಮಹಿಳೆಯರ ತಂಡ. ಊರಿನ ಮಹಿಳಾಮಣಿ ಯರೆಲ್ಲ, ರಂಗುರಂಗಿನ ಉಡುಪು ಧರಿಸಿ, ಒಬ್ಬರನ್ನೊಬ್ಬರು ಮೀರಿಸುವಂತೆ ಮುಖಾ ಲಂಕಾರ, ಕೇಶಾಲಂಕಾರ ಮಾಡಿಕೊಂಡು, ಜೋಗಜಲಪಾತದ ಕಿವಿ ಕಿವುಡಾಗುವಂತೆ ಹರಟೆ ಹೊಡೆಯುತ್ತಾ (ಅಂದರೆ ಆತ್ಮಪ್ರಶಂಶೆ ಮಾಡಿಕೊಳ್ಳುತ್ತಾ) ನಿಂತಿದ್ದರು. ಗೂಗೆ ಕತ್ತೆಗಳ ಕೂಗನ್ನು ಯಾರೂ ಗಮನಿಸಲಿಲ್ಲ. ಆಗಸದಲ್ಲಿ ಚಂದ್ರ. ರಸ್ತೆಯ ಉದ್ದಕ್ಕೂ ಪೆಟ್ರೊಮ್ಯಾಕ್ಸ್ ದೀಪಗಳು. ಸುಗಂಧಪೂರಿತ ಮಾರುತ. ಬೀದಿ ಸ್ವರ್ಗ ಲೋಕವೋ ಎಂಬಂತೆ ಕಂಗೊಳಿಸುತ್ತಿತ್ತು. ಅಷ್ಟರಲ್ಲಿ—

ಮೆರವಣಿಗೆಯ ಮುಂಭಾಗದಲ್ಲಿ ಕತ್ತೆಸಂಕಣ್ಣನ ಕಾರಿನಲ್ಲಿ ಕುಳಿತಿದ್ದ ಹುಡುಗ ನೊಬ್ಬ ಅಳತೊಡಗಿದ. ಹಿರಿಯನೊಬ್ಬ ಸಿಟ್ಟಿನಿಂದ 'ಕತ್ತೇ' ಎಂದ. ಮೈಕಾಸುರ ಅದನ್ನು ಧ್ವನ್ಯಾಸುರನ ಮೂಲಕ, ವಿಶ್ವಪ್ರಸರಣ ಮಾಡಿದ. ಪಕ್ಕದಲ್ಲೇ ಗೂಗೆ ಬಸಣ್ಣನ ಕಾರಿನಲ್ಲಿ ಕುಳಿತವ 'an eye for an eye' ಎಂಬ ತತ್ವಕ್ಕನುಸಾರವಾಗಿ 'ಗೂಗೇ' ಎಂದು ಅಬ್ಬರಿಸಿದ. ಮರುಕ್ಷಣದಲ್ಲೇ ಹುಡುಗ Vote for ಕತ್ತೇ ಎಂದ ಅವರು Vote for ಗೂಗೇ ಎಂದರು. ಕಾರುಗಳು ಹೊರಟೇಬಿಟ್ಟವು. ನೂರಾರು ಕಾರುಗಳೊಗಿಂದಲೂ ಕೈಗಳು ಹೊರಗೆ ಬಂದು ಗಾಳಿಯಲ್ಲಿ ಚಲಿಸಿದವು ಹೇಯ್! Vote for ಎಂದು ಬೀದಿಗೆ ಬೀದಿಯೇ ಘೋಷಿಸಿತು. ಮನೆಯಲ್ಲಿ ಮಲಗಿದವರೆಲ್ಲಾ ಎದ್ದು ಹೊದಿಕೆಗಳ ಸಹಿತ ವೋಟ್‌ಫಾರ್ ಎಂದು ಬಡಿದುಕೊಳ್ಳುತ್ತಾ ಬೀದಿಗೆ ನುಗ್ಗಿದರು. ಮನೆ ಮಾಳಿಗೆಗಳಿಂದ 'ವೋಟ್' ಎಂಬ ಧ್ವನಿ ಮೊಳಗಿತು. ಕತ್ತೆಗಳು ಹಾಡಿದವು. ಗೂಗೆಗಳು ಚಿಲ್ಲಾನ ಮಾಡಿದವು. ನಿಮಿಷಾರ್ಧದಲ್ಲಿ ಒಂದು ಗಂಡು ಪಿಳ್ಳೆಯೂ ಬೀದಿಯಲ್ಲಿರಲಿಲ್ಲ. ಊರಿನ ಎಲ್ಲ ಬೀದಿಗಳಲ್ಲೂ ಜಯಕಾರ ಏಕಕಾಲಕ್ಕೆ ಕೇಳಬಂತು.

ಕ್ಯಾಡಿಲಾಕ್‌ನಲ್ಲಿ ಕುಳಿತ ವರನು, ಚಂಗನೆ ನೆಗೆದು ವೋಟ್‌ಫಾರ್ ಗೂಗೆ ಎಂದು ಹತ್ತುಹೆಜ್ಜೆ ಓಡಿದ. ಏನನ್ನೋ ನೆನೆದು ತಟ್ಟನೆ ನಿಂತುಬಿಟ್ಟ. ಸ್ಥಂಭಿತನಾಗಿ ಪೂರ್ವವನ್ನು ನೆನೆದ: ಪ್ರಥಮ ದರ್ಶನ, ಪ್ರೇಮೋದ್ಭವ-ಕೋರ್ಟ್‌ಷಿಪ್, ವಿವಾಹ ನಿಶ್ಚಯ. ಆಗ ತನ್ನ ಪ್ರೇಯಸಿ ಹಾಕಿದ ಕರಾರು. ಕೇವಲ ಒಂದು ವಾರದ ಕೆಳಗೆ-ರಾಯರ ವಿರುದ್ಧ ಪ್ರಚಾರಮಾಡುವವರಿಗೂ ನನಗೂ ಯಾವ ಆತ್ಮೀಯತೆಯೂ ಇರಲಾರನು. ವರ ನಿರ್ಧರಿಸಿದ. (ಅವನು ರಾಯನ ಮಿತ್ರ) — ನಾನು ಕೊಡಲಿರುವ ಓಟು ಗೂಗೆಗಲ್ಲ! ನನ್ನ ಸ್ವಪ್ನಸುಂದರಿಗೆ. ಹಿಂತಿರುಗಿ ಬಂದು 'ಮನದನ್ನೆ-ಮನ್ನಿಸು' ಎಂದ. ರಾಯನ ಅದೃಷ್ಟತಾರೆ ಉದಿಸಿತು.

ಕ್ಯಾಡಿಲಾಕ್ ಹಿಂದೆ ನಿಂತಿದ್ದ ಮಹಿಳಾಮುಖಂಡರ ಟೆಂಪರೇಚರ್ 107.45 ಡಿಗ್ರಿಗೆ ಏರಿತ್ತು. 'ಈ ಗೂಗೆ ಪಂಜೋಳಾಗ, ಕತ್ತೆ ಓಸಡಗ, ಏನು ಬಂತೇ ಇವಕ್ಕೋಗ್ಗಾಲ' ಎಂದವರು ಗುಡುಗಿದರು. ಇವರಿಗೆ ಮನೆ ಬೇಡ, ಮಾರು ಬೇಡ, ಹೆಂಡಿರು ಮಕ್ಕಳು, ಹಬ್ಬ ದಿಬ್ಬಣ ಯಾತ್ರ್ಯಾತ್ರದ್ದೂ ಬೇಡ ಓಟಂತೆ ಓಟು! ಬರ್ಲಿ ನಾಳೆ. ಕೊಡ್ತೀವಿಪ್ರಿಗೆ ಕಸ್ಪೊರ್ಕೆ ಏಟು ಎಂದು ಮಾತಾಡಿಕೊಂಡರು. ಅಹಾ! ಇಂಥಾ ಮದುವೆ ಮೆರವಣಿಗೆ ಹತ್ತುವರ್ಷಕ್ಕೆ ಒಂದು ಸಾರಿ ಬರೋದಿಲ್ಲ. ಇವರು ಕತ್ತೆ ಹತ್ತಿ ಮೆರೆಯೋದಕ್ಕೆ ಆರಂಭಿಸಿ ಹದಿನೈದು ದಿವಸವಾಯ್ತು. ಅಧ್ವಾನಗಳು! ಮನೆ ಒಳಗೆಲ್ಲಾ ಗೂಗೆ, ತಪ್ಪಿದರೆ ಕತ್ತೆ. ನಮಗೆ ಅವಕಾಶವೇ ಇಲ್ಲ. ಇದ್ದ ಒಂದೂ ಕೈತಪ್ಪಿಹೋಯ್ತಲ್ಲ ಎಂದು ತಳಮಳಿಸಿದರು.

ಆಗ, ರಾಯ, ಎಲ್ಲಿಂದಲೋ ಅವತರಿಸಿ ಅವರೆದುರು ನಿಂತ. 'ಮಹಿಳೆಯರೇ' ಎಂದ. 'ಎರಡು ಮಾತು ಹೇಳಲು ಅವಕಾಶಕೊಡುವಿರಾ?' ಎಂದು ನಮ್ರನಾಗಿ ಪ್ರಾರ್ಥಿಸಿದ.

'ಹೇಳಿ, ಹೇಳಿ' ಮಹಿಳೆಯರು ಒಕ್ಕೊರಲಿನಿಂದ ಒಪ್ಪಿಗೆ ಸೂಚಿಸಿದರು.

'ಈಗಾದ ದುರಂತಕ್ಕೆ ಕಾರಣರಾರು? ವ್ಯಕ್ತಿಗಳನ್ನು ನಾನು ನಿಂದಿಸುತ್ತಿಲ್ಲ. ಆದರೆ ಅವರ ಸ್ವಾರ್ಥ ದೇಶಘಾತಕವಾದುದು. ತಮ್ಮ ಹೀನ ಸ್ವಾರ್ಥಕ್ಕಾಗಿ ಅವರು ಏನು ಮಾಡುವುದಕ್ಕೂ ಹಿಂಜರಿಯುತ್ತಿಲ್ಲ ಎಂದು ಬಂದಿತ್ತು ಇಂಥ ಮೆರವಣಿಗೆ? ಇನ್ನೆಂದು ಸಿಕ್ಕೀತು? ಇಂಥ ಮೆರವಣಿಗೆ ಇಲ್ಲದಂತೆ ಮಾಡಿದವರು ಯಾರು? ಅವರಿಂದ ದೇಶದ, ಸ್ತ್ರೀಯರ ಹಿತರಕ್ಷಣೆ ಆದೀತೇ? ಸ್ವಲ್ಪಯೋಚಿಸಿ'.

'ರಾಯರಿಗೆ ಜಯವಾಗಲಿ'. ಭಯಂಕರ ಚಪ್ಪಾಳೆ.

'ತಮ್ಮ ಸ್ವಾರ್ಥಕ್ಕಾಗಿ ದೈವದ ಹೆಸರನ್ನು ಬೀದಿಗೆಳೆದಿದಾರೆ ಜನ. ಇದು ಒಣ ಹೆದರಿಕೆ. ರಾಸಭೇಶ್ವರ ಉಲ್ಲೂಕೇಶ್ವರರು ಕಾಮಾಂತಕರೆಂದು ಜಂಬಕೊಚ್ಚಿಕೊಳ್ಳುತ್ತಿ

ದ್ದರೂ, ಇಂದು ಅನಂಗ ಅಮರನಾಗಿದಾನೆ. ಪ್ರೇಮದಿಂದಲೇ ಲೋಕದ ಉದ್ಧಾರ. ಅದನ್ನು ಸೋಲಿಸಲು ರಾಸಭೇಶ್ವರ ಉಲ್ಲೂಕೇಶ್ವರ ಎಂದೂ ಮುಂದೆ ಬರುವುದಿಲ್ಲ'.

'ಪ್ರೇಮ ನನ್ನ ದೇವರು. ಈ ನನ್ನ ದೇವತೆಯನ್ನು ಇನ್ನಾವ ದೇವತೆಯೂ ಸೋಲಿಸಲಾರದು.

'ಕೊನೆಯದಾಗಿ ನನ್ನದೊಂದು ವಿನಂತಿ. 'ನಿಮ್ಮ ಓಟು ನನಗೇ'. ಸ್ತ್ರೀಯರೆಲ್ಲರೂ ಪ್ರತಿಜ್ಞಾಪೂರ್ವಕ ಪ್ರಮಾಣವಚನ ಕೊಟ್ಟು ಮನೆಗೆ ಹಿಂತಿರುಗಿ ಬಾಗಿಲು ಹಾಕಿಕೊಂಡು ಮಲಗಿದರು. ಹನ್ನೆರಡು, ಒಂದರವರೆಗೂ ಜನ ವೋಟು ವೋಟೆಂದು ಅವ್ಯಾಹತವಾಗಿ ಅರಚುತ್ತಲೇ ಇದ್ದರು. ಪೆಟ್ರೋಲ್ ಮುಗಿದ ಕಾರು ಅಲ್ಲಲ್ಲೇ ನಿಂತವು. ಜನ ಕಾಲ್ಸೋತು, ಗಂಟಲು ಸೋತು, ಮನೆಗೆ ಹಿಂತಿರುಗಿದಾಗ–ಬಾಗಿಲು ತೆರೆಯಲಿಲ್ಲ ರಾಯ ತಮಗೆ ಕೈಕೊಟ್ಟ ಸಂಗತಿಯ ಅರಿವು ಬಸಣ್ಣ ಸಂಕಣ್ಣಗಳಿಗೆ ಬಂದಾಗ, ರಾತ್ರಿ ಮೂರುಗಂಟೆ. 'ಮಾರೋ ಇಸ್ಕು' ಎಂದರವರು. ಸರ್ವಪೈಲ್ವಾನ್‌ಗಳಾದ ಖಲಂದರ್, ಸಿದ್ಧಪ್ಪ, ಹುಚ್ಚಣ್ಣ, ಮುಮ್ದು, ಗಳಿಗೆ ಅಣತಿಇತ್ತರು. ಕಾಲಾಪಾನೀ ಪಕ್ಷದ ಮೇಲ್ಕಂಡ ಶ್ರೀಯುತರು ಅಲ್ಲಾಹೋ ಅಕಭರ್, ಜೈ ಬಲಭೀಮಸಮರ್ಥ, ಗೋವಿಂದೋ ಗೋವಿಂದಾ! ಎಂದು ಮುಗಿಲೊಡೆಯುವಂತೆ ಅಬ್ಬರಿಸಿ, ಸುಚಿತ್ರಾ ಭವನದ ಕಟ್ಟೆಯಮೇಲೆ ಮಲಗಿದ್ದ ರಾಯನ ಎರಡು ಕಾಲುಗಳನ್ನು ಹಿಡಿದು ಜೋಕಾಸಯಾಡಿಸುತ್ತಾ ನಡುರಸ್ತೆಗೆ ತಂದರು. ರಾಯ, ಹೋ ಎಂದು ಅಬ್ಬರಿಸಿದ. ಜನರೆಚ್ಚತ್ತು ಬಾಗಿಲು ತೆರೆದು ರಾಯನ ರಕ್ಷಣೆಗೆ ಬರುವಷ್ಟರಲ್ಲಿ ಮೇಲ್ಕಂಡ ಪೈಲ್ವಾನರು ರಾಯನ ಕೈಯೊಂದನ್ನು ಮುರಿದು, ತದುಕಿ, ಬಡಿದು ಚಚ್ಚಿಹಾಕಿದ್ದರು. ನಂತರ ಓಡಿಹೋದರು.


ಊರಿನ ಸ್ತ್ರೀವೃಂದವೆಲ್ಲಾ ರಾಯನಿಗಾಗಿ ಕಣ್ಣೀರ್ಕರೆಯಿತು. ಸ್ಟ್ರೆಚರಿನಮೇಲೆ ರಾಯನ ಮೆರವಣಿಗೆ ಬೆಳಗಿನಜಾವ ನಡೆಯಿತು.

ಅಂತೂ ಬೆಳಗಾಯಿತು :—

ಸಂಕಣ್ಣ ಬಸಣ್ಣನ ಏಜಂಟರು ವಾಹನಗಳನ್ನು ಕೈಬಿಟ್ಟು ಕ್ಯೂನಲ್ಲಿ ನಿಂತರು. ಗೂಗೆಗಳು ಕುರುಡಾಗಿ ಭೂತುಗಳನ್ನು ಹೊಕ್ಕು ಅಧಿಕಾರಿಗಳ ಜೇಬಿನ ಮೊರೆ ಹೊಕ್ಕವು. ಗಾರ್ದಭಗಳು 'ಹ್ರೋಯ್ಞು' ಎಂಬ ಮಹಾನಿನಾದದೊಡನೆ ಸ್ವಾತಂತ್ರ್ಯ ಘೋಷಣೆಮಾಡಿ ದಿಕ್ಕಾಪಾಲಾಗಿ ಓಡಿದವು.

ಬೆಳಗಾದಕೂಡಲೇ ಹೆಂಗಸರೆಲ್ಲಾ ರಾಯನ ಸೂಚನೆ ಪ್ರಕಾರ ಓಟುಮಾಡುವುದೇ ಇಲ್ಲ ಎಂದು ಹೇಳಿದರು. ಗಂಡಸರೆಲ್ಲಾ ಭಯಂಕರ ದಟ್ಟಣೆಯಿಂದ ನೆರೆದು ಒಂದು ಗಂಟೆಯವರೆಗೂ ವೋಟುಗಳನ್ನು ಚೆಲ್ಲಿದರು. ಕತ್ತೆ ಗೂಗೆಗಳ ಏಜಂಟರು ಶಿಪ್ಪರಲಾಗ ಹಾಕಿದರೂ ಹೆಂಗಸರು Total refusal ವ್ಯಕ್ತಪಡಿಸಿದರು.

ಮತಮತ ಮಧ್ಯಾಹ್ನ. ಹನ್ನೆರಡು ಗಂಟೆಗೆ ರಾಯನು ಸ್ತ್ರೀಮುಖಂಡರ ಮಿತ ಸಭೆಯನ್ನುದ್ದೇಶಿಸಿ ಮಾತನಾಡಿದ.



“ಮಹಿಳೆಯರೇ, ಹೊತ್ತುಬಂದಿದೆ. ನಿಮ್ಮ ಓಟು ನನಗೆ. ಇಲ್ಲವೇ ಸರ್ವನಾಶ. ನಿಮ್ಮ ಕರುಣೆಯ ಸಸಿ ನಾನು. ನಿಮ್ಮ ಗುರುತಿಗೇ ನಿಮ್ಮ ಓಟು. ಅದೋ ಕಾಲ ಸನ್ನಿಹಿತವಾಯ್ತು. ಒಂದು ಗಂಟೆಗೆ ನಿಮ್ಮ ನಿಮ್ಮ ಬೂತುಗಳ ಬಳಿ ನೀವು ಹಾಜರಾಗಿರಿ”.

ಒಂದು ಗಂಟೆಗೆ ಹೊರಟ ಸ್ತ್ರೀಯರು ಪೋಲಿಂಗ್ ಬೂತುಗಳ ಬಳಿ ಎರಡು ಗಂಟೆಗೆ ಸೇರಿದರು. ಸುಚಿತ್ರಾ, ಪ್ರಿಯದರ್ಶಿನಿ, ಸ್ನೇಹಲತಾ, ಉತ್ಪಲಾ, ಆರತಿ, ಮಾಲಾ, ಮೊದಲಾದ ತರುಣಿಯರು ಐಡೆಂಟಿಫಿಕೇಷನ್ ಸ್ಲಿಪ್‌ಗಳನ್ನು ಈ ಮೊದಲೇ ಒದಗಿಸಿದ್ದರು.

ಬಸಣ್ಣ, ಸಂಕಣ್ಣ ಒಂದೂಮುಕ್ಕಾಲಕ್ಕೇ ತಮ್ಮ ತಮ್ಮ ಗೂಡಾರಗಳನ್ನು ಸೇರಿ ತಾವೇ ಗೆಲ್ಲುವೆವೆಂದು ಜಂಭಕೊಚ್ಚಿಕೊಳ್ಳುತ್ತಾ ಮಂಡಕ್ಕಿ ಉಸುಳಿ ತಿನ್ನುತ್ತಿದ್ದರು. ಹೆಂಗಸರು ಓಟಿಗೆ ಬಂದ ಸುದ್ದಿ ಕೇಳಿ ಅವರು ಅಬ್ಬರಿಸುತ್ತಾ ಓಡಿಬಂದರು.

ಆದರೆ—ಸ್ತ್ರೀಯರೆಲ್ಲಾ ಪೋಲಿಂಗ್‌ಬೂತ್ ಕಟ್ಟಡಗಳ ಆವರಣದಲ್ಲಿ ಸುತ್ತ ಮುತ್ತ ನೂರು ಗಜಗಳ ಒಳಗೇ ಇದ್ದರು. ರಾಯನ ಸ್ವಯಂಸೇವಕರು ಕತ್ತೆ, ಗೂಗೆ ಪಾರ್ಟಿಗಳ ಜನರಿಗೆ ಒಂದು ಬೋರ್ಡ್ ತೋರಿಸಿದರು. ಪೋಲೀಸ್ ಬಂದೋಬಸ್ತು ಜೋರಾಗಿತ್ತು.

‘ಈ ಆವರಣದೊಳಗೆ ಯಾರೂ ಪ್ರಚಾರಮಾಡಬಾರದು’. ಆ ಬೋರ್ಡಿನ ಮೇಲೆ ಕೂತ ಗೂಗೆಯೊಂದು ನಕ್ಕುಬಿಟ್ಟಿತು. ಬಸಣ್ಣ ಅದರಕಡೆ ಕಲ್ಲುಬೀರಿದ.

ಫುಟ್‌ಪಾತ್‌ಮೇಲೆ ನಿಂತ ಕತ್ತೆಗಳೆರಡು ಸಂಕಣ್ಣನನ್ನು ನೋಡಿ 'see that ass' ಎಂದು ಮಾತಾಡಿಕೊಂಡವು. ರಾತ್ರಿ ಎಂಟರವರೆಗೆ ತುರುಸಿನಿಂದ ಮತದಾನವಾಯ್ತು.

ರಾಯರ ಪ್ರಚಂಡ ವಿಜಯ

ಮುಗಿಲುಹಳ್ಳಿ ವೆಸ್ಟಿನ ಒಟ್ಟು ಮತದಾರರು—57819

ಪೋಲಾದ ಮತಗಳು	—	40,000
ಶ್ರೀ ರಾಯರು (ಸ್ವ)	—	14,052
ಶ್ರೀ ಭಂಗಿ ಬಸಣ್ಣನವರು	—	12,974
ಶ್ರೀ ಬಿಂಕದ ಸಂಕಣ್ಣನವರು	—	12,974

ರಾಯರಿಗೆ ಬಿದ್ದ ಮತಗಳ ವಿವರ—ಸ್ತ್ರೀಯರು 13000. ರಾಸಭಾಧಿಪತಿಗಳು, ಮಧ್ಯಮವರ್ಗಕ್ಕೆ ಮತ್ತು ನೊಂದ ಸನಾತನಿಗಳು 1050. ಬಿಂಕದ ಸಂಕಣ್ಣ, ಭಂಗಿ ಬಸಣ್ಣ 2. ಕೊನೆಯವರಿಬ್ಬರೂ ಪೋಲಿಂಗ್‌ಬೂತಿಗೆ ಹೋದಾಗ ರಾಯರ ಗುರ್ತು ನೋಡುತ್ತಾ ನಿಂತರು. ಅಪರರಿಯದಂತೆ ರಾಯರಿಗೆ ಅವರ ವೋಟು ಹೋಗಿದ್ದವು.

ಸಂಪಾದಕಿ, ಕುಮಾರಿ ಸುಚಿತ್ರಾರವರು ಏಪ್ರಿಲ್ ಒಂದರಂದು ಗೂಗೆ ಬಸಣ್ಣ, ಕತ್ತೆ ಸಂಕಣ್ಣ ಇಬ್ಬರಿಗೂ ಸನ್ಮಾನಸಮಾರಂಭವೊಂದಕ್ಕೆ ಅಧ್ಯಕ್ಷರಾಗಿ ಬರಬೇಕೆಂದು ಪ್ರತ್ಯೇಕವಾಗಿ ಆಹ್ವಾನ ಕಳಿಸಿದಾರೆ.

ಅವರ ಕೈಬರಹದ ಮಾಸಪತ್ರಿಕೆಯ ಇತ್ತೀಚಿನ ಸಂಪಾದಕೀಯ ಹೀಗೆಂದು ಹೇಳುತ್ತಿದೆ.

"ರಾಯರು ಎದೆಗುಂದದೆ ಪ್ರತಿಗಾಮಿಗಳ ವಿರುದ್ಧ ಹೋರಾಡಿ ಜಯಗಳಿಸಿದರು. ಅವರ ವಿಜಯ ಜನತೆಯ ವಿಜಯ, ಸ್ತ್ರೀಯರ ವಿಜಯ, ಸದ್ಬುದ್ಧಿಯ ವಿಜಯ, ಯೋಗ್ಯತೆಗೆ ಸತ್ಯಕ್ಕೆ ಪ್ರಜಾಪ್ರಭುತ್ವ ತತ್ವಕ್ಕೆ ದೊರೆತ ವಿಜಯ.

— ಅ. ರಾ. ಸೇ.

'L'

ಎಲ್ಲೆಂಬಕ್ಷರ ರಕ್ಷೆಯ ಪಡೆದು
ಎಲ್ಲೆಲ್ಲಿಗು ಅವ ತಿರುಗುತಲಿದ್ದನು
ಮೋಟಾರ್‌ಸೈಕಲ್ ಮೋಟಯ್ಯ!
ಎದುರಿಗೆ ಬಂದಾ ಗಾಡಿಗಳೆಲ್ಲವು
ಮುದುರುತ ಕುದುರೆಯ ಫಕ್ಕನೆ ನಿಲ್ಲಿಸಿ,
ಕಾರಿಗೆ ಬ್ರೇಕನು ಹಾಕುತ ನಿಲ್ಲಿಸಿ,
ತಿರುಗಿಸಿ ಬಲಕೂ ಎಡಕೂ ಬೇಗನೆ,
ಸತ್ತೆ! ಕೆಟ್ಟೆ! ಬದುಕಿದೆನಪ್ಪಾ!
ಕತ್ತೆಯು ಹಿಂದಕೆ ಕಾಲನು ಬಡಿಯುವ
ತೆರದಲಿ ಹಿಂದಕೆ ಪಟಪಟ ಪಟಪಟ
ಹೊಗೆಯನು ಉಗುಳುತ ಬಂದನು ಮೋಟ!
ಮಕ್ಕಳು ಮರಿಗಳ ಚೀತ್ಕಾರ!
ಹಸುಗಳ ಅಂಬಾ, ಕುರಿಗಳ ಬ್ಯಾ—
ಎಮ್ಮೆಯ ಹಿಂಡನು ಭೇದಿಸಿ ನುಗ್ಗಿದ;
ಸುಮ್ಮನೆ ಫುಟ್‌ಪಾತ್ ಮೇಲಕೆ ಹರಿದ;
ಮರಗಳ ಬಳಸುತ, ಗೂಡೆಗಳನ್ನೇ
ಹೊತ್ತು ಹೋಗುವಾ ಮಹಿಳಾಮಂದೆಗೆ
ಡಿಕ್ಕಿಯ ಹೊಡೆದ; ಮಡಕೆಯನೊಡೆದ;
ಅಡ್ಡಾದಿಡ್ಡಿ ಸವಾರಿಗೈದ; ಎಲ್ಲೆಂಬಕ್ಷರ ರಕ್ಷೆಯಲಿ
ಮೋಟಾರ್‌ಸೈಕಲ್ ಮೋಟಯ್ಯ!!

— ಕಾಮತ್.

29—3—57 ರಿಂದ ಅಮೋಘ ಪ್ರಾರಂಭ

ಬೆಂಗಳೂರು : ಜೈಹಿಂದ್ ಮತ್ತು ಶಾರದಾ ಚಿತ್ರಮಂದಿರಗಳಲ್ಲಿ



ತಾರಾಗಣ : **ಪ್ರತಿಮಾದೇವಿ, ಚಿಂದೋಡಿ ವೀರಪ್ಪ, ಹರಿಣಿ, ಪ್ರಿಯಂವದ, ನರಸಿಂಹರಾಜು** ಮುಂತಾದವರು.

★ ಪಾರ್ವತಿಯ ತಾಮಸ ಕಳೆಯಾದ ಮಾಯೆಯ ಸೋಲು,

★ ಪಾರ್ವತಿಯ ಸಾತ್ವಿಕ ಕಳೆಯಾದ ಅಕ್ಕಮಹಾದೇವಿಯ ಜಯ,

★ ಸಿದ್ಧರಾಮ ಬಸವೇಶ್ವರ ಇವರಿಗೆ ಜ್ಞಾನೋಪದೇಶ,

★ ವಿಶೇಷ ಆಕರ್ಷಣೆ : ಮೂರು ರೀಲುಗಳ ಗೇವಾಕಲರ್ ವರ್ಣಚಿತ್ರ.


30—3—57 ರಿಂದ


ಮೈಸೂರು : **ಚಾಮುಂಡೇಶ್ವರಿ** ದಾವಣಗೆರೆ : **ಅಶೋಕ** ಚಿತ್ರದುರ್ಗ : **ಶಂಕರ್**

ಚಿಕ್ಕಮಗಳೂರು : **ಜ್ಯೋತಿ ಸೆಂಟ್ರಲ್**. ಚಿತ್ರಮಂದಿರಗಳಲ್ಲಿ

ಕನ್ನಡನಾಡಿನ ಅಗ್ರಗಣ್ಯ ಶಿವಭಕ್ತನೊಬ್ಬನ ಜೀವಿತದ ಪ್ರಾಮಾಣಿಕ ಕಥಾಚಿತ್ರ !

AN EMERALD RELEASE


ಯಾವ ಕೆಲಸಕ್ಕೂ ಇರಲಿ
ತಕ್ಕುದಾದ ಶಾಲಿಮಾರ್ ಪೇಯಿಂಟ್
ಅನ್ವಯಿಸುತ್ತದೆ.
be BRIGHT – specify
SHALIMAR PAINT
ಸ್ಪಷ್ಟವಾಗಿ ಹೇಳಿರಿ
ಶಾಲಿಮಾರ್ ಪೇಯಿಂಟ್ ಪ್ರಾಡಕ್ಟ್‌ಗಳು
ಎಲ್ಲಾ ತರದ ನಮ್ಮ ತಯಾರಿಕೆಗಳ ವಿವರಗಳನ್ನು ಕೊಡುವ 'ಶಾಲಿಮಾರ್ ರೆಡಿ ರೆಫರೆನ್ಸ್' ನೋಟಿಸುಬಗ್ಗೆ ಪೋ. ಬಾ. 68, ಕಲ್ಕತ್ತ - 1 ಕ್ಕೆ ಬರೆದುಕೊಳ್ಳಿರಿ.
SPW 359



ವಿದ್ಯುತ್ಸಹಾಯದಿಂದ
ನಡೆಸಲ್ಪಡುವ

ಕಿರ್ಲೋಸ್ಕರ್

ಪಂಪು ಸೆಟ್ಟುಗಳು

ವ್ಯವಸಾಯ ಮತ್ತು ನೀರಾವರಿ ಕೆಲಸಗಳಿಗೆ ಅತ್ಯುಪಯುಕ್ತವಾಗಿವೆ.

★ ಪ್ರತಿ ಕಿರ್ಲೋಸ್ಕರ್ ಪಂಪು ಸೆಟ್ಟಿಗೂ ಮಾರಾಟಾ ನಂತರದ ಸರ್ವಿಸ್ ಕೊಡಲಾಗುತ್ತೆ.

★ ಕಿರ್ಲೋಸ್ಕರ್ ಪಂಪು ಸೆಟ್ಟನ್ನು ಕೊಳ್ಳುವವರಿಗೆ ಉತ್ತಮವಾದ ಸ್ಪೇರ್ ಪಾರ್ಟ್‌ಗಳನ್ನು ಒದಗಿಸಲಾಗುತ್ತೆ.

ಸಕ್ಕರೆ, ರಸಾಯನಿಕ ಮತ್ತು ಇತರ ಕಾರ್ಖಾನೆಗಳಲ್ಲಿ ವಿವಿಧ ದ್ರವ ವಸ್ತುಗಳನ್ನು ಪಂಪುಮಾಡಲು ಯೋಗ್ಯವಾದ ಪಂಪು ಸೆಟ್ಟುಗಳೂ ದೊರೆಯುತ್ತವೆ.

ಹೆಚ್ಚಿನ ವಿವರಗಳನ್ನು ಕೇಳಿ ತಿಳಿಯಿರಿ.

ಕಿರ್ಲೋಸ್ಕರ್ ಬ್ರದರ್ಸ್ ಲಿ.,

ಶ್ರೀ ನರಸಿಂಹರಾಜ ರಸ್ತೆ

ಪೋಸ್ಟ್ ಬಾಕ್ಸ್ ೬೦೩ : : ಬೆಂಗಳೂರು ೨.

Printed by B. S. Iyengar, Bangalore City.
Publisher—B. N. Gupta. Editor—M. Sivaram.